UASB LIBRARY
Newspaper Clippings
Pg .1 Wednesday 10-11-2021 Jai Kisan



ಆನ್‌ಲೈನ್ ಮತ್ತು ಭೌತಿಕವಾಗಿ ಮೇಳ ವೀಕ್ಷಣೆಗೆ ವ್ಯವಸ್ಥೆ

ಜಿಕೆವಿಕೆ: ನಾಳೆಯಿಂದ 'ಕೃಷಿ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನಗಳ ಮಾಹಿತಿ ನೀಡಲು ಹಾಗೂ ಕೃಷಿಯಲ್ಲಿ ಲಾಭದಾಯಕ ವಿಧಾನಗಳನ್ನು ಪರಿಚಯಿಸುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) 'ಕೃಷಿ ಮೇಳ'ವನ್ನು ನವೆಂಬರ್ 11ರಿಂದ 14ರವರೆಗೆ ಆಯೋಜಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಕುಲಪತಿ ಎಸ್. ರಾಜೇಂದ್ರ ಪ್ರಸಾದ್,'ಕೃಷಿ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ (ನ.11) ಬೆಳಿಗ್ಗೆ 11 ಗಂಟೆಗೆ ಉದ್ಘಾಟಿಸಿದ್ದಾರೆ. ಇದೇ ವೇಳೆ ಕೃಷಿ ಸಾಧಕರಿಗೆ ವಿವಿಧ ಪ್ರಶಸ್ತಿಗಳ ಪ್ರದಾನವೂ ನಡೆಯಲಿದೆ' ಎಂದರು.

'ಶಾಸಕ ಕೃಷ್ಣಬೈರೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ, ಸಚಿವರಾದ ಎಸ್.ಟಿ.ಸೋಮಶೇಖರ್, ಕೆ.ಸುಧಾಕರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಕಳೆದ ವರ್ಷ ಕೋವಿಡ್ ಕಾರಣದಿಂದ ಮೇಳಕ್ಕೆ ಭೇಟಿ ನೀಡುವವರ ಪ್ರಮಾಣ ಸೀಮಿತಗೊಳಿಸಿ, ಆನ್‌ಲೈನ್ ಮೂಲಕ ಮೇಳ ವೀಕ್ಷಣೆಗೆ ಹೆಚ್ಚಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಬಾರಿ ಕೋವಿಡ್ ತೀವ್ರತೆ ತಗ್ಗಿರುವುದರಿಂದ ಮೊದಲಿನಂತೆ ಮೇಳ ವೀಕ್ಷಿಸಬಹುದು. ಆದರೆ, ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಕಡ್ಡಾಯ. ದೂರದ ಊರಿನ ರೈತರಿಗಾಗಿ ಆನ್‌ಲೈನ್ ಮೂಲಕವೂ ಮೇಳದ ನೇರಪ್ರಸಾರ ಇರಲಿದೆ' ಎಂದು ವಿವರಿಸಿದರು.



ಕೃಷಿ ಮೇಳಕ್ಕೆ ಸಿದ್ಧಗೊಂಡಿರುವ ಪ್ರದರ್ಶನ ತಾಕುಗಳನ್ನು ಕುಲಪತಿ ಎಸ್‌ರಾಜೇಂದ್ರ ಪ್ರಸಾದ್ ವೀಕ್ಷಿಸಿದರು. ಸಂಶೋಧನಾ ನಿರ್ದೇಶಕ ವೈ.ಜಿ.ಷಡಕ್ಷರಿ, ಪ್ರೊ.ಕೆ.ಶಿವರಾಂ ಹಾಗೂ ಇತರರು ಇದ್ದರು.

ಕೃಷಿ ತಂತ್ರಜ್ಞಾನದ ಪ್ರಾತ್ಯಕ್ಷಿಕೆಗಳು

- ಖುಷ್ಕಿ ಬೇಸಾಯದ ಪದ್ಧತಿಗಳು
- ತೋಟಗಾರಿಕೆ ಬೆಳೆ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ
- ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ
- ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳು
- ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ
- ಮಣ್ಣು ಪರೀಕ್ಷೆಗೆ ಅನುಗುಣವಾಗಿ ಬೆಳೆ ಸ್ಪಂದನೆ
- ಮಳೆ ಹಾಗೂ ಬಾವಣಿ ನೀರಿನ ಕೊಯ್ಲು
- ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ
- ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ
- ಪಶುಸಂಗೋಪನೆ, ಹೈನುಗಾರಿಕೆ, ಮೀನು ಸಾಕಣೆ
- ಹವಾಮಾನ ಚತುರ ಕೃಷಿ
- ಸಾವಯವ ಕೃಷಿ ಪದ್ಧತಿಗಳು

ಮೇಳದ ವಿಶೇಷಗಳು

- 500 ಪ್ರದರ್ಶನ ಮಳಿಗೆಗಳು
- ಕೃಷಿ ಪರಿಕರಗಳ ಮಾರಾಟ ವ್ಯವಸ್ಥೆ
- ಜಿಕೆವಿಕೆ ಪ್ರವೇಶ ದ್ವಾರದಿಂದ ಉಚಿತ ಸಾರಿಗೆ
- ರಿಯಾಯಿತಿ ದರದಲ್ಲಿ ಆಹಾರ
- ವಾಹನ ನಿಲುಗಡೆ ವ್ಯವಸ್ಥೆ

ಆನ್‌ಲೈನ್ ಮೂಲಕ 'ಕೃಷಿ ಮೇಳ' ವೀಕ್ಷಿಸಿ

ವೆಬ್‌ಪೇಜ್:https://uasbangalore.edu.in/index.php/krishimela-2021-en
ವೆಬ್‌ಸೈಟ್:https://www.uasbangalore.edu.in
ಯುಟ್ಯೂಬ್:https://www.youtube.com/c/UASBangaloreGKVK
ಫೇಸ್‌ಬುಕ್:https://www.facebook.com/sis.uasb/
ಟ್ವಿಟರ್:https://twitter.com/BangaloreUas

10 ತಳಿಗಳ ಬಿಡುಗಡೆ: 'ಹೆಚ್ಚು ಇಳುವರಿ ಮತ್ತು ಬೆಂಕಿರೋಗ ನಿರೋಧಕ ಶಕ್ತಿಯುಳ್ಳ ಭತ್ತದ ಎರಡು ತಳಿಗಳು, ಬುಡಕೊಳೆ ರೋಗ ನಿರೋಧಕತೆ ಹೊಂದಿರುವ ರಾಗಿ, ತುಕ್ಕು ಮತ್ತು ಎಲೆ ಅಂಗಮಾರಿ ರೋಗಗಳಿಂದ ಪಾರಾಗಬಲ್ಲ ನವಣೆ, ಕಂದು ಚುಕ್ಕೆ ರೋಗ ತಡೆಯಬಲ್ಲ ಸಾಮೆ ಮತ್ತು ಬರಗು ತಳಿಗಳು, ಹೂ ಗೊಂಚಲು ಗೋಳಾಕಾರದಿಂದ ಕೂಡಿರುವ ಬೀಜದ ದಂಟು, ಸ್ವಯಂ ಗರಿ ಕಳಚುವ ಹಾಗೂ ಬೆಲ್ಲ ತಯಾರಿಗೆ ಯೋಗ್ಯವಾದ ಕಬ್ಬು, ಉತ್ತಮ ಮೇವಿನ ಜೀರ್ಣತೆ ಗುಣಗಳನ್ನು ಹೊಂದಿರುವ ಮೇವಿನ ತೋಕೆ ಹೆಸರಿನ ಗೋಧಿ, ಕಡಿಮೆ ಅಂಟು ಪ್ರಮಾಣ ಮತ್ತು ಹೆಚ್ಚು ಸಕ್ಕರೆ ಅಂಶ ಹೊಂದಿರುವ 'ಬೈರಚಂದ್ರ' ಹೆಸರಿನ ಹಲಸು ಸೇರಿದಂತೆ ಈ ಬಾರಿ 10 ಹೊಸ ತಳಿಗಳನ್ನು ಹೊರತರಲಾಗಿದೆ. ಮೇಳದಲ್ಲಿ ಈ ತಳಿಗಳ ಪ್ರಾತ್ಯಕ್ಷಿಕೆಗಳು ಸಿದ್ಧಗೊಂಡಿವೆ. ರೈತರು ನೇರವಾಗಿ ತೋಟಗಳಲ್ಲೇ ಹೊಸ ತಳಿಗಳ ಮಾಹಿತಿ ಪಡೆಯುವ ವ್ಯವಸ್ಥೆಯನ್ನೂ ಮಾಡಿದ್ದೇವೆ' ಎಂದು ರಾಜೇಂದ್ರ ಪ್ರಸಾದ್ ಹೇಳಿದರು.

ರೈತರಿಗಾಗಿ ಚರ್ಚಾಗೋಷ್ಠಿ: ನ.12ರಿಂದ 14ರವರೆಗೆ ಪ್ರತಿದಿನ ಬೆಳಿಗ್ಗೆ 10.30ರಿಂದ 12.30ರವರೆಗೆ ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿಗಳು ನಡೆಯಲಿವೆ. ಕೃಷಿ ಸಂಬಂಧಿತ ಪ್ರಶ್ನೆಗಳಿಗೆ ಕೃಷಿ ತಜ್ಞರು ಹಾಗೂ ವಿಜ್ಞಾನಿಗಳ ತಂಡ ಭೌತಿಕವಾಗಿ ಮತ್ತು ಜೂಮ್ ಸಭೆ ಮೂಲಕ ಪರಿಹಾರ ನೀಡಲಿದೆ.

ಕೃಷಿ ವಿದ್ಯಾರ್ಥಿಗಳಿಂದ ಉಳುಮೆ ಉತ್ಸವ ಕಾರ್ಯಕ್ರಮ

10-11-2021
Pv Pg 03C

ಶಿಡ್ಲಘಟ್ಟ: ತಾಲೂಕಿನ ಅಪ್ಪೇಗೌಡನಹಳ್ಳಿಯ ಸರ್ಕಾರಿ ಶಾಲೆಯ ಆವರಣದಲ್ಲಿ ಅಂತಿಮ ವರ್ಷದ ಕೃಷಿ ಪದವಿ ವಿದ್ಯಾರ್ಥಿಗಳ ತೊಂಬತ್ತು ದಿನಗಳ ಗ್ರಾಮೀಣ ಕಾರ್ಯಾನುಭವದ ಕೊನೆಯ ದಿನದ ಕೃಷಿ ವಸ್ತು ಪ್ರದರ್ಶನ ಮತ್ತು ವಿಚಾರಗೋಷ್ಠಿಯ ''ಉಳುಮೆ ಉತ್ಸವ'' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಸದಸ್ಯ, ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ಮಾತನಾಡಿ, ''ರೈತರಿಂದ ಕಲಿಯುವುದು ಮತ್ತು ರೈತರಿಗೆ ಕಲಿಸುವುದು'' ಎಂಬ ಉದ್ದೇಶದಿಂದ ಗ್ರಾಮೀಣ ಜಾಗೃತಿಯ ಕಾರ್ಯಾನುಭವದಲ್ಲಿ ಮೂರು ತಿಂಗಳು ಹಳ್ಳಿಯಲ್ಲಿ ವಾಸಿಸಿದ ವಿದ್ಯಾರ್ಥಿಗಳು ಅಪ್ಪೇಗೌಡನಹಳ್ಳಿಯ ಮನೆಮಕ್ಕಳಾಗಿದ್ದಾರೆ ಎಂದು ತಿಳಿಸಿದರು. ನಾಲ್ಕು ಗೋಡೆಯ ಮಧ್ಯೆ ಕಲಿಯುವ ಕಲಿಕೆಯ ಜೊತೆಗೆ ರೈತರೊಂದಿಗೆ ಒಡನಾಡಿ ಕಲಿಯುವ ಕಲಿಕೆ ವಿದ್ಯಾರ್ಥಿಗಳ ಬದುಕಿಗೆ ಸಾಕಷ್ಟು ಮೂಲ ದ್ರವ್ಯ ಒದಗಿಸುತ್ತದೆ. ರೈತರೊಂದಿಗೆ ವಿದ್ಯಾರ್ಥಿಗಳು ಬೆರೆಯಬೇಕು, ಅವರ ಸಮಸ್ಯೆ ಆಲಿಸಬೇಕು. ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು. ಆಪರಿಚಿತರಾಗಿ ಬಂದಿದ್ದ ವಿದ್ಯಾರ್ಥಿಗಳು ಪರಿಚಿತರಾಗಿ ಹೋಗುವಂತಹ ಈ ಅನುಭವ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತದೆ. ಗ್ರಾಮದ ಹಿರಿಯರು, ರೈತರು ವಿದ್ಯಾರ್ಥಿಗಳಿಗೆ ಸಾಕಷ್ಟು ನೆರವಾಗಿದ್ದಾರೆ ಎಂದರು. ವಿದ್ಯಾರ್ಥಿಗಳ ತೊಂಬತ್ತು ದಿನಗಳ ಗ್ರಾಮೀಣ ಕಾರ್ಯಾನುಭವದ ಕೊನೆಯ ದಿನದಂದು ಅವರ ಗ್ರಾಮ ವಾಸದ ಅನುಭವವನ್ನು ವೈವಿಧ್ಯಮಯ ಬೆಳೆ, ವಸ್ತು ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಪ್ರದರ್ಶಿಸಲಾಗಿತ್ತು. ಬೀಜೋಪಚಾರ, ಎರೆಹುಳುಗೊಬ್ಬರ, ರಸಮೇವಿನ ತಯಾರಿಕೆ, ಕೃಷಿಹೊಂಡ, ನೀರನ್ನು ಸದ್ಬಳಕೆ ಮಾಡಿಕೊಳ್ಳುವ ವಿಧಾನ, ಮಣ್ಣಿನ ಫಲವತ್ತತೆ ಕಾಪಾಡುವುದು, ಸೋಲಾರ್ ಶಕ್ತಿಯ ಸದ್ಬಳಕೆ ಮುಂತಾದವುಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಪ್ರದರ್ಶಿಸಲಾಗಿತ್ತು. ವಿದ್ಯಾರ್ಥಿಗಳ ವಿವಿಧ ಮಳಿಗೆಗಳ ಮೂಲಕವೂ ರೈತರಿಗೆ ಹಾಗೂ ಸುತ್ತಮುತ್ತಲಿನ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಪ್ರಯತ್ನ ನಡೆಸಿದ್ದರು.

10-11-2021
Hd Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

"Nobody said it would easy, so don't give up when it gets hard"

ನಾಳೆಯಿಂದ 3 ದಿನ ಆಯೋಜನೆ | ಹಚ್ಚ ಹಸಿರಿನ ಆವರಣದಲ್ಲಿ ಸುತ್ತಾಟಕ್ಕೆ ಅವಕಾಶ

ಪಿಕ್‌ನಿಕ್ ಮಾದರಿ ಕೃಷಿ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

ಜಿಕೆವಿಕೆ ಆವರಣದಲ್ಲಿ ನ.11ರಿಂದ ಮೂರು ದಿನಗಳ ಕೃಷಿ ಮೇಳ ಆರಂಭವಾಗಲಿದ್ದು, ನಗರದ ಜನರು ಪಿಕ್‌ನಿಕ್ ಮಾದರಿಯಲ್ಲಿ ಕುಟುಂಬ ಸಮೇತ ತೆರಳಿ ಸಮಯ ಕಳೆಯಬಹುದಾಗಿದೆ.

ಹಚ್ಚ ಹಸಿರಿನ ವಿಶಾಲ ಪರಿಸರದಲ್ಲಿ ಸುತ್ತಾಡಲು ಅವಕಾಶವಿದೆ. ನಾನಾ ಬೆಳೆಗಳನ್ನು ಬೆಳೆಸಿದ್ದು, ಅವುಗಳ ಮಾಹಿತಿ ಪಡೆಯಬಹುದು. ಕೃಷಿ ಪರಿಕರ, ಯಂತ್ರೋಪಕರಣಗಳನ್ನು ವೀಕ್ಷಿಸಬಹುದು. ಪಶು ಸಂಗೋಪನೆ, ಕುರಿ, ಕೋಳಿ, ಮೀನು ಸಾಕಣೆ ಮಾಹಿತಿ ಪಡೆಯಹುದು.

ಟೆರೇಸ್ ಗಾರ್ಡನ್ ಮಾಡುವ ಸರಳ ವಿಧಾನಗಳ ಬಗ್ಗೆ ಮಾಹಿತಿ ಪಡೆಯಬಹುದಾಗಿದೆ. ಅದಕ್ಕೆ ಬೇಕಾದ ಪರಿಕರಗಳು, ಅದಕ್ಕೆ ತಗಲುವ ವೆಚ್ಚ ಮತ್ತಿತರ ಮಾಹಿತಿಯನ್ನು ಸ್ಥಳದಲ್ಲೇ ಕೇಳಿ ಪಡೆಯಬಹುದು. ನ.13 ಮತ್ತು 14ರಂದು ತಾರಸಿ ತೋಟದ ಬಗ್ಗೆ ತಜ್ಞರಿಂದ ವಿಚಾರಗೋಷ್ಠಿಗಳು, ಚರ್ಚಾ ಕಾರ್ಯಕ್ರಮಗಳನ್ನು ಕೃಷಿ ಮೇಳದಲ್ಲಿ ಈ ಬಾರಿ ವಿಶೇಷವಾಗಿ ಆಯೋಜಿಸಲಾಗಿದೆ.

ರಿಯಾಯಿತಿ ದರದ ಊಟ : ಮೇಳಕ್ಕೆ ಬರುವ ಎಲ್ಲರಿಗೂ ರಿಯಾಯಿತಿ ದರದಲ್ಲಿ ಗುಣಮಟ್ಟದ ಊಟ (ಮುದ್ದೆ, ಸಾರು, ಅನ್ನ, ಮಜ್ಜಿಗೆ, ಒಂದು ಸಿಹಿ) ದ ವ್ಯವಸ್ಥೆ ಇರುತ್ತದೆ. ಸ್ವಂತ ವಾಹನದಲ್ಲಿ ಹೋದರೆ ನಿಲುಗಡೆಗೆ ಸೂಕ್ತ ಸ್ಥಳಾವಕಾಶ ಇರುತ್ತದೆ. ಬಸ್‌ನಲ್ಲಿ ಹೋಗುವುದಾರೆ ಜಿಕೆವಿಕೆ ನಿಲ್ದಾಣದಲ್ಲಿ ಇಳಿದರೆ, ಮೇಳದ ಜಾಗಕ್ಕೆ ತಲುಪಲು ವಿವಿಯ ಬಸ್ ವ್ಯವಸ್ಥೆ ಮಾಡಲಾಗಿದೆ. ಬೇಡ ಎನ್ನುವುದಾದರೆ ಹಸಿರಿನ ಮಧ್ಯೆ ಹೆಜ್ಜೆ ಹಾಕುತ್ತಾ ತೆರಳಬಹುದಾಗಿದೆ.



ಮೇಳದ ಜಾಗ ತಲುಪಲು ವಿವಿಯಿಂದಲೇ ಬಸ್ ವ್ಯವಸ್ಥೆ

ಹೈಡ್ರೊಪೊನಿಕ್ಸ್ ಕೃಷಿ ವಿಧಾನದ ಮಾಹಿತಿ

ಕೃಷಿ ವಿವಿ ಸಂಶೋಧನಾ ವಿದ್ಯಾರ್ಥಿಗಳು ಹೈಡ್ರೊಪೋನಿಕ್ಸ್ ಕೃಷಿ ಪದ್ಧತಿಯನ್ನು ಮತ್ತಷ್ಟು ಸರಳಗೊಳಿಸಿ ಪ್ರಾಯೋಗಿಕವಾಗಿ ಹಸಿರು ಮನೆಯಲ್ಲಿ ನಾನಾ ಬೆಳೆಗಳನ್ನು ಬೆಳೆದಿದ್ದಾರೆ. ಮಣ್ಣು, ಗೊಬ್ಬರ ಹಾಕದೆ ನೀರಿನಲ್ಲೇ ಗಿಡಗಳಿಗೆ ಬೇಕಾದ ಪೋಷಕಾಂಶಗಳನ್ನು ಬಳಸುವ ಮೂಲಕ ಫಲಭರಿತ ಮತ್ತು ಸಮೃದ್ಧವಾದ ಹಣ್ಣು, ತರಕಾರಿ, ಸೊಪ್ಪು, ಸಲಾಡ್‌ಗೆ ಬಳಸುವ ಲೆಟ್ಯೂಸ್ ಲೀವ್ಸ್ ಮತ್ತಿತರ ಬೆಳೆಗಳನ್ನು ಬೆಳೆಯಬಹುದು. ಮನೆಗೆ ಅಗತ್ಯವಿರುವಷ್ಟು ಬೆಳೆಯಲು ಈ ವಿಧಾನ ಬಳಕೆ ಮಾಡಬಹುದು. ಈ ವಿಧಾನದಲ್ಲಿ ವಾಣಿಜ್ಯ ಉದ್ದೇಶಕ್ಕೂ ಬಳಕೆ ಮಾಡಬಹುದಾಗಿದೆ.

ನವೆಂಬರ್, ಡಿಸೆಂಬರ್‌ನಲ್ಲೂ ಹಲಸು

ಸಾಮಾನ್ಯವಾಗಿ ಹಲಸಿನ ಹಣ್ಣು ಮಾರ್ಚ್-ಏಪ್ರಿಲ್‌ನಲ್ಲಿ ಮಾತ್ರ ಕಾಣಸಿಗುತ್ತದೆ. ಇದೀಗ ನವೆಂಬರ್-ಡಿಸೆಂಬರ್‌ನಲ್ಲೂ ಹಲಸು ಸವಿಯಬಹುದು. ಜಿಕೆವಿಕೆಯ ಕೃಷಿ ಮೇಳದಲ್ಲಿ ವರ್ಷದಲ್ಲಿ ಎರಡು ಬಾರಿ ಅಂದರೆ ಮಾರ್ಚ್-ಏಪ್ರಿಲ್‌ನಲ್ಲಿ ಒಂದು ಬಾರಿ ಹಾಗೂ ನವೆಂಬರ್-ಡಿಸೆಂಬರ್‌ನಲ್ಲಿ ಹಲಸು ಕೊಯ್ಲಿಗೆ ಬರುವಂತಹ ಬೈರಚಂದ್ರ ಎಂಬ ಹೊಸ ಹಲಸಿನ ತಳಿಯನ್ನು ಬೆಂಗಳೂರು ಕೃಷಿ ವಿವಿಯು ಮೇಳದಲ್ಲಿ ಪರಿಚಯಿಸಿದೆ. ಇದು ಹೆಚ್ಚು ಅಂಟಿರುವುದಿಲ್ಲ ಉತ್ತಮವಾದ ತೊಳೆಗಳನ್ನು ಹೊಂದಿದ್ದು, ಹಣ್ಣಿನ ತೊಗಟೆ ತೆಳುವಾಗಿರುತ್ತದೆ. ಸಕ್ಕರೆ ಅಂಶ 30-33 ಬ್ರಿಕ್ಸ್ ಇರುತ್ತದೆ. ಹೀಗಾಗಿ ಈ ಹಲಸು ಸವಿಯಲು ಬಲು ರುಚಿಯಾಗಿರುತ್ತದೆ. ಪ್ರತಿ ಮರ ವರ್ಷಕ್ಕೆ 120 ರಿಂದ 150 ಹಣ್ಣುಗಳನ್ನು ಬಿಡುತ್ತದೆ. ಇದನ್ನು ಎಳೆಯದರಲ್ಲಿ ತರಕಾರಿಯಾಗಿ, ನಂತರ ಹಣ್ಣಿನ ರೂಪದಲ್ಲಿ ಬಳಸಬಹುದು.

ಜಿಕೆವಿಕೆಯಲ್ಲಿ ನ.11ರಿಂದ ನಾಲ್ಕು ದಿನ ರೈತರ ಹಬ್ಬ | 65 ಲಕ್ಷ ರೂ. ಮೌಲ್ಯದ ಹಳ್ಳಿಕಾರ್ ಜೋಡೆತ್ತು | ಲಕ್ಷ ರೂ. ಮೌಲ್ಯದ ಹೋತ | ಪ್ರಗತಿಪರ ರೈತರಿಗೆ ಪ್ರಶಸ್ತಿ

ನಾಳೆಯಿಂದ ಕಳೆಗಟ್ಟಲಿದೆ ಕೃಷಿ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

65 ಲಕ್ಷ ರೂ. ಮೌಲ್ಯದ ಮಳವಳ್ಳಿಯ ಹಳ್ಳಿಕಾರ್ ಜೋಡೆತ್ತು, 3 ಲಕ್ಷ ರೂ. ಬೆಲೆಯ ದೊಡ್ಡಬಳ್ಳಾಪುರದ 'ಜಮುನಾ ಪ್ಯಾರಿ' ಹೋತ, ಗಂಟೆಗೆ ನೂರಾರು ಕೆ.ಜಿ.ರೇಷ್ಮೆ ಗೂಡು ಬಿಡಿಸುವ ಯಂತ್ರ... ಇವು ಈ ಬಾರಿ ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿ ನ.11ರಿಂದ 14ರವರೆಗೆ ನಡೆಯುವ ಕೃಷಿ ಮೇಳದ ಪ್ರಮುಖ ಆಕರ್ಷಣೆಗಳು.

ನ.11ರಂದು ಸಿಎಂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೇಳವನ್ನು ಉದ್ಘಾಟಿಸಲಿದ್ದಾರೆ ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

''ರೈತರ ಆದಾಯ ದ್ವಿಗುಣಗೊಳಿಸುವಿಕೆಗೆ ಕೃಷಿ ತಾಂತ್ರಿಕತೆಗಳು' ಥೀಮ್‌ನಡಿ ಈ ಬಾರಿಯ ಮೇಳ ಆಯೋಜಿಸಲಾಗಿದೆ. ಭೌತಿಕವಾಗಿ ಮೇಳದಲ್ಲಿ ಪಾಲ್ಗೊಳ್ಳಲು ಆಗದವರು ಆನ್‌ಲೈನ್ ಮೂಲಕ ಭಾಗವಹಿಸಬಹುದು. ಈ ಹಿಂದೆ ಪ್ರತಿದಿನ ಸುಮಾರು 60-70 ಸಾವಿರ ಮಂದಿ ಆಗಮಿಸುತ್ತಿದ್ದರು. ಈ ಬಾರಿ ಕೋವಿಡ್ ಭೀತಿಯಿಂದಾಗಿ ನಿತ್ಯ 15-20 ಸಾವಿರ ಮಂದಿ ಭೌತಿಕವಾಗಿ ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ,'' ಎಂದು ಅವರು ತಿಳಿಸಿದರು. ಗೋಷ್ಠಿಯಲ್ಲಿ ವಿಸ್ತರಣಾ ನಿರ್ದೇಶಕ ಡಾ. ಎನ್. ದೇವಕುಮಾರ್, ಸಂಶೋಧನಾ ನಿರ್ದೇಶಕ ಡಾ. ವೈ.ಜಿ. ಷಡಕ್ಷರಿ, ಕೃಷಿ ವಿವಿ ಬೆಂಗಳೂರಿನ ಪ್ರಾಧ್ಯಾಪಕರಾದ ಡಾ. ಕೆ. ಶಿವರಾಮು ಉಪಸ್ಥಿತರಿದ್ದರು.



ಕೃಷಿ ಮೇಳದಲ್ಲಿ ಪ್ರದರ್ಶನಗೊಳ್ಳಲಿರುವ ನೂತನ ತಳಿಗಳ ಬಗ್ಗೆ ಮಾಹಿತಿ ನೀಡುತ್ತಿರುವ ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್.

ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದವರು

ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಆತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿಗೆ ಹಾಸನ ಜಿಲ್ಲೆದೊಡ್ಡಮಗ್ಗೆಯ ರೈತ ಎಂ.ಸಿ. ರಂಗಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ. ಡಾ. ಎಂ.ಎಚ್. ಮರೀಗೌಡ ರಾಜ್ಯ ಮಟ್ಟದ ಆತ್ಯುತ್ತಮ ತೋಟಗಾರಿಕಾ ರೈತ/ರೈತ ಮಹಿಳೆ ಪ್ರಶಸ್ತಿಗೆ ದೊಡ್ಡಬಳ್ಳಾಪುರ ತಾಲೂಕು ದೊಡ್ಡತುಮಕೂರಿನ ರೈತ ಟಿ.ಎಂ. ಅರವಿಂದ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಆತ್ಯುತ್ತಮ ರೈತ ಮಹಿಳೆ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಯಡೂರು ವೈ.ಜಿ. ಮಂಜುಳಾ, ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಆತ್ಯುತ್ತಮ ರೈತ ಪ್ರಶಸ್ತಿಗೆ ದೊಡ್ಡಬಳ್ಳಾಪುರ ತಾಲೂಕು ಲಕ್ಷ್ಮೀದೇವಿಪುರದ ಸಿ. ನವಿಕ್ರಮ್, ಡಾ. ಆರ್. ದ್ವಾರಕೀನಾಥ್ ಆತ್ಯುತ್ತಮ ರೈತ ಪ್ರಶಸ್ತಿಗೆ ಕೋಲಾರ ಜಿಲ್ಲೆಯ ಅರಿನಾಗನಹಳ್ಳಿ ರೈತ ಮುನಿರೆಡ್ಡಿ, ಡಾ. ಆರ್. ದ್ವಾರಕೀನಾಥ್ ಆತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಗೆ ಹಿರಿಯ ವಿಜ್ಞಾನಿ ಡಾ. ಎ.ಪಿ. ಮಲ್ಲಿಕಾರ್ಜುನಗೌಡ, ಡಾ. ಎಂ.ಎಚ್. ಮರೀಗೌಡ ಆತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿಗೆ ಬಾಗಲಕೋಟ ತೋಟಗಾರಿಕಾ ವಿವಿ ಸಂಶೋಧನಾ ನಿರ್ದೇಶಕ ಡಾ. ಎಚ್.ಪಿ. ಮಹೇಶ್ವರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ವೆಬ್‌ಸೈಟ್ ಲಿಂಕ್ಸ್

https://uasbangalore.edu.in/index.php/krishimela-2021-en

https://www.uasbangalore.edu.in

https://bit.ly/3CNVMCR

ID: 3765459767 Passcode: 22121

500 ಮಳಿಗೆಗಳು: ಈ ಬಾರಿ ಕೋವಿಡ್ ಹಿನ್ನೆಲೆಯಲ್ಲಿ 250 ಮಳಿಗೆಗಳನ್ನು ಮಾತ್ರ ತೆರೆಯಲು ನಿರ್ಧರಿಸಲಾಗಿತ್ತು. ಆದರೆ ಮಹಿಳಾ ಉದ್ಯಮಿಗಳು, ಸಾವಯವ ರೈತೋತ್ಪಾದಕ ಸಂಸ್ಥೆಗಳು ಮತ್ತಿತರರಿಂದ ಹೆಚ್ಚಿನ ಬೇಡಿಕೆ ಬಂದ ಹಿನ್ನೆಲೆಯಲ್ಲಿ 500 ಮಳಿಗೆಗಳನ್ನು ತೆರೆಯಲು ವಿವಿ ನಿರ್ಧರಿಸಿದೆ.

ನೂತನ ತಳಿಗಳ ಆಕರ್ಷಣೆ: ಅಧಿಕ ಇಳುವರಿ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ 10 ನೂತನ ಕೃಷಿ ತಳಿಗಳನ್ನು ಸಂಶೋಧಿಸಿದ್ದು, ಮೇಳಕ್ಕೆಂದೇ ಈ ಹತ್ತೂ ತಳಿಗಳ ಬೆಳೆಗಳನ್ನು ಜಿಕೆವಿಕೆ ಆವರಣದಲ್ಲಿ ಬೆಳೆಸಲಾಗಿದೆ. ಈ ಬೆಳೆ (ತಾಕುಗಳ)ಗಳ ಪ್ರದರ್ಶನವಿರುತ್ತದೆ. ಅದರಂತೆ ಭತ್ತದ ಎರಡು ತಳಿಗಳು (ಎಂಎಸ್‌ಎನ್-99, ಕೆಎಂಪಿ-220), ರಾಗಿ (ಕೆಎಂಆರ್ -316), ಬರಗು (ಜಿಪಿಯುಪಿ-28), ನವಣೆ (ಜಿಪಿಯುಎಫ್ -3), ಸಾಮೆ (ಜಿಪಿಯುಎಲ್-6), ಬೀಜದ ದಂಟು (ಕೆಬಿಜಿಎ-15), ಕಬ್ಬು (ಸಿಓಸಿ-18061), ವರ್ಷಕ್ಕೆ ಎರಡು ಬಾರಿ ಫಸಲು ಕೊಡುವ ಬೈರಚಂದ್ರ ಹಲಸು ತಳಿ ಮತ್ತು ಗೋವುಗಳಿಗೆ ವಿಶೇಷ ಪೌಷ್ಟಿಕಾಂಶಗಳುಳ್ಳ ಮೇವಿನ ತೋಕೆ ಗೋಧಿ ತಳಿಗಳ ತೋಟಗಳು (ತಾಕುಗಳು) ಗಮನ ಸೆಳೆಯಲಿವೆ.

10-11-2021
Vk Pg 02

10-11-2021
Vk Pg 02

Krishi Mela to be held from Nov. 11 to 14

STAFF REPORTER
BENGALURU

Krishi Mela 2021, organised by the University of Agricultural Sciences-Bengaluru, will be held from November 11 to 14 on the GKVK campus.

People can visit from 9 a.m. to 6 p.m. and entry is free. The mela will be inaugurated by Chief Minister Basavaraj Bommai on November 11 at 11 a.m.

According to S. Rajendra Prasad, Vice-Chancellor, UAS-B, 10 new crop varieties and 28 farm technologies will be released at the event.

Speaking to presspersons, he said that the main focus will be on improving the technology for medium and small farmers.

The farmers who cannot participate physically can obtain solutions to their agricultural issues online.

The mela will also have an exhibition on farm machinery and technology in over 450 to 500 stalls this year. During the event, State, district and taluk-level awards will be presented to farmers, he added. As many as 15,000 to 20,000 visitors are expected per day to the mela.

Annual Krishi Mela kicks off at GKVK tomorrow

BENGALURU, DHNS: Krishi Mela, the annual fair that showcases the latest advances in agriculture, agro products and agro-industries, will be held from November 11 to 14.

The University of Agricultural Sciences, Bengaluru, has lined up several programmes, including awarding farmers, during the four-day event that would be inaugurated by Chief Minister Basavaraj Bommai. New varieties of paddy, ragi, millet and other seeds will be released during the event.

Vice-Chancellor S Rajendra Prasad said: "Last year, Covid restrictions had forced us to limit the number of visitors but we had live-streamed the proceedings so that people could still be part of the fare. This time, all visitors will be allowed but they must follow the Covid-appropriate behaviour of wearing masks and maintaining social distance."

Farmers from far-off districts will still be able to visit the fare online, he added.

New varieties of cereals, millets at 4-day Krishi Mela

TIMES NEWS NETWORK

Bengaluru: Taking technology to the doorstep of farmers and making agriculture profitable to the agrarian community, the four-day Krishi Mela will showcase new varieties of millets, cereals and fruits. Starting Wednesday, the mela — organised by University of Agricultural Sciences — will focus on agricultural technology, said UAS vice-chancellor S Rajendra Prasad.

OPENS TODAY

Catering to the popularity of jackfruit, the mela will have a new variety called Byra Chandra with less gum and more sugar content and antioxidants. The tree will start bearing fruits in less than four years. "You will get fruits twice a year and each tree will bear 120-150 fruits in a year," said a scientist.

UAS has introduced several disease-resistant varieties and a special variety of sugarcane suited for production of jaggery. "With health-conscious people opting for millets, there is a great demand for ragi (finger millet). The new variety is expected to yield 17-19 quintals per acre while withstanding harsh climate and diseases," Prasad said.

The university couldn't organise the mela for two years owing to the pandemic. This time, it will be held both offline and online. "We are expecting a footfall of 15,000 to 20,000 daily; over 500 stalls will display crops, fruit and vegetable varieties. Chief minister Basavaraj Bommai will inaugurate the mela," he added.

ಹತ್ತು ತಳಿ ಪರಿಚಯ: 28 ತಾಂತ್ರಿಕತೆ ಬಿಡುಗಡೆ

ನಾಳೆಯಿಂದ ಕೃಷಿ ಮೇಳ



ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ (ಯುಎಎಸ್-ಬಿ) ನ.11 ರಿಂದ 14ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಕೃಷಿ ಮೇಳ-2021 ಆಯೋಜಿಸಿದೆ.

ಜಿಕೆವಿಕೆ ಆವರಣದ ನಾಯಕ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುಎಎಸ್-ಬಿ ಕುಲಪತಿ ಪ್ರೊ. ಎಸ್. ರಾಜೇಂದ್ರ ಪ್ರಸಾದ್, ಈ ಬಾರಿ ಕೃಷಿ ಮೇಳದಲ್ಲಿ 10 ಹೊಸ ತಳಿಗಳು ಹಾಗೂ 28 ಕೃಷಿ ತಂತ್ರಜ್ಞಾನಗಳು ಬಿಡುಗಡೆ ಮಾಡಲಾಗುವುದು. ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿರುವ ರೈತ ಮತ್ತು ರೈತ ಮಹಿಳೆಯರಿಗೆ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುವುದು. ಅಂಗೈಯಲ್ಲಿ ಕೃಷಿ ಮೇಳ, ವೆಬ್ ಪೇಜ್-ವೆಬ್ ಸೈಟ್-ಯು ಟ್ಯೂಬ್ ಜೂಮ್‌ಗಳಲ್ಲಿ ಮೇಳವನ್ನು ವೀಕ್ಷಿಸಬಹುದಾಗಿದೆ ಎಂದರು.

10 ಹೊಸ ತಳಿ ಅಭಿವೃದ್ಧಿ: ಬೆಂಗಳೂರು ಕೃಷಿ ವಿವಿ ರೈತರಿಗಾಗಿ ಈ ಬಾರಿ 10 ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದು, ಹೊಸ ತಳಿಗಳನ್ನು ಪ್ರಾತ್ಯಕ್ಷಿಕೆಗಳ ರೈತರು ಕೃಷಿ ಮೇಳದಲ್ಲಿ ವೀಕ್ಷಿಸಬಹುದು. ರೈತರಿಗೆ ಹೆಚ್ಚು ಅನುಕೂಲಕರವಾದ ಭತ್ತ (ಕೆಎಂಪಿ-220 ಮತ್ತು ಎಂಎಸ್‌ಎನ್-99), ರಾಗಿ (ಕೆಎಂಆರ್-316), ನವಣೆ (ಜಿಪಿಯುಎಫ್-3), ಸಾಮೆ (ಜಿಪಿಯುಎಲ್-6), ಬರಗು (ಜಿಪಿಯುಪಿ-28), ಬೀಜದ ದಂಟು (ಕೆಬಿಜಿಎ-15), ಕಬ್ಬು (ಸಿಒವಿಸಿ-18061) ಹಲಸು (ಬೈರಚಂದ್ರ), ಮೇವಿನ ತೋಕೆ ಗೋಧಿ (ಆರ್‌ಒ-11-1) ನೂತನ ತಳಿಗಳು ಹಾಗೂ 28 ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲ ತಳಿಗಳು ಹಿಂದಿನ ತಳಿಗಳಿಗಿಂತ ಶೇ.10ರಷ್ಟು ಹೆಚ್ಚು ಇಳುವರಿ ನೀಡುವ ಸಾಮರ್ಥ್ಯ ಹೊಂದಿದ್ದು, ರೋಗಗಳಿಗೆ ಹೆಚ್ಚು ತುತ್ತಾಗುವುದಿಲ್ಲ. ಈ ತಳಿಗಳನ್ನು ಬೆಳೆಯುವುದರಿಂದ ರೈತರಿಗೆ ಸಮಸ್ಯೆಗಳು ಕಡಿಮೆಯಾಗಿದ್ದು, ಹೆಚ್ಚು ಲಾಭ ಪಡೆಯಬಹುದಾಗಿದೆ ಎಂದರು.

ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಎನ್. ದೇವಕುಮಾರ್, ಸಂಶೋಧನ ನಿರ್ದೇಶಕ ಡಾ.ವೈ.ಜಿ.ಷಡಾಕ್ಷರಿ, ಪ್ರಾಧ್ಯಾಪಕ ಡಾ.ಕೆ. ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತರು

- ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ರಾಜ್ಯ ಮಟ್ಟಡ ಅತ್ಯುತ್ತಮ ರೈತ ಪ್ರಶಸ್ತಿ-ಹಾಸನ ಜಿಲ್ಲೆಯ ಎಂ.ಸಿ.ರಂಗಸ್ವಾಮಿ
- ಡಾ.ಎಂ.ಎಚ್. ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ-ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಟಿ.ಎಂ. ಅರವಿಂದ
- ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ-ಹಾಸನ ಜಿಲ್ಲೆಯ ಕುಮಾರಿ ವೈ.ಜಿ.ಮಂಜುಳಾ
- ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ-ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿ.ವಿಕ್ರಮ್
- ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ-ಕೋಲಾರ ಜಿಲ್ಲೆಯ ಮನಿರೆಡ್ಡಿ
- ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ಪ್ರಶಸ್ತಿ-ದೊಡ್ಡಬಳ್ಳಾಪುರದ ಕೃಷಿ ವಿಜ್ಞಾನ ಕೇಂದ್ರ ಹಾಡೋನಹಳ್ಳಿ ಹಿರಿಯ ವಿಜ್ಞಾನಿ ಡಾ.ಎ.ಪಿ. ಮಲ್ಲಿಕಾರ್ಜುನಗೌಡ
- ಡಾ.ಎಂ.ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ-ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕ ಡಾ.ಎಚ್.ಪಿ. ಮಹೇಶ್ವರಪ್ಪ.

ನಾಳೆಯಿಂದ ನಗರದಲ್ಲಿ 4 ದಿನ ಕೃಷಿ ಮೇಳ

10 ಹೊಸ ತಳಿ, 28 ನೂತನ ತಂತ್ರಜ್ಞಾನ ಬಿಡುಗಡೆ | ಆನ್‌ಲೈನ್‌ನಲ್ಲಿ ನೇರ ಪ್ರಸಾರ: ಕೃಷಿ ವಿವಿ ಕುಲಪತಿ ರಾಜೇಂದ್ರ ಪ್ರಸಾದ್ ಕೃಷಿ ಸಾಧಕರಿಗೆ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಪ್ರಶಸ್ತಿ | ಕಡಿಮೆ ವೆಚ್ಚದಲ್ಲಿ ಅಧಿಕ ಇಳುವರಿ ಪಡೆಯುವ ಬಗ್ಗೆ ಪ್ರಾತ್ಯಕ್ಷಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭತ್ತ, ರಾಗಿ ಸೇರಿದಂತೆ ವಿವಿಧ ಬೆಳೆಯ 10 ಹೊಸ ತಳಿ, 28 ನೂತನ ತಂತ್ರಜ್ಞಾನ ಬಿಡುಗಡೆ ಮಾಡುವ ಮೂಲಕ ನೂತನ ತಂತ್ರಜ್ಞಾನ ಮತ್ತು ಆವಿಷ್ಕಾರಗಳು ರೈತರಿಗೆ ತಲುಪಿಸಲು ಈ ವರ್ಷದ 'ಕೃಷಿ ಮೇಳ' ನ.11ರಿಂದ 14ರವರೆಗೆ ಬೆಂಗಳೂರಿನ ಹೆಬ್ಬಾಳದಲ್ಲಿರುವ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆಯಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಕುಲಪತಿ ಡಾ। ಎಸ್.ರಾಜೇಂದ್ರ ಪ್ರಸಾದ್, ಭತ್ತ, ರಾಗಿ, ಬರಗು, ನವಣೆ, ಕಬ್ಬು, ಬೈರಚಂದ್ರ ಹಲಸು ಮುಂತಾದ 10 ಹೊಸ ತಳಿ ಪರಿಚಯಿಸಲಾಗುವುದು. 28 ನೂತನತಂತ್ರಜ್ಞಾನಬಿಡುಗಡೆಮಾಡಲಾಗುವುದು. ಕೃಷಿ ಸಾಧಕರಿಗೆ ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು. ಕೊರೋನಾ ಮಾರ್ಗಸೂಚಿ ಅನ್ವಯ ಮೇಳ ಆಯೋಜಿಸಲಾಗುತ್ತಿದೆ. ಭೌತಿಕ ಮಾತ್ತು ಆನ್‌ಲೈನ್‌ನಲ್ಲೂ ಪಾಲ್ಗೊಳ್ಳಬಹುದು. ವೆಬ್‌ಪೇಜ್, ವೆಬ್ ಸೈಟ್, ಯೂಟ್ಯೂಬ್, ಟ್ವಿಟರ್, ಫೇಸ್‌ಬುಕ್, ಇನ್ ಸ್ಟಾಗ್ರಾಮ್ ಮತ್ತು ಜೂಮ್ ಮೂಲಕ ನೇರ ಪ್ರಸಾರ ಮಾಡಲಾಗುವುದು. ರೈತರ ಕೃಷಿ ಸಮಸ್ಯೆಗಳಿಗೆ ತಜ್ಞರು ಸ್ಥಳದಲ್ಲೇ ಪರಿಹಾರ ಸೂಚಿಸಲಿದ್ದಾರೆ. ಕಡಿಮೆ ವೆಚ್ಚದಲ್ಲಿ ಅಧಿಕ ಇಳುವರಿ ಪಡೆಯುವ ಬಗೆಯನ್ನು ಪ್ರಾತ್ಯಕ್ಷಿಕೆ ಮೂಲಕ ತಿಳಿಸಲಾಗುವುದು ಎಂದು ವಿವರಿಸಿದರು.

ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ। ಎನ್. ದೇವಕುಮಾರ್, ಸಂಶೋಧನಾ ನಿರ್ದೇಶಕ ಡಾ। ವೈ.ಜಿ.ಷಡಾಕ್ಷರಿ, ಪ್ರಾಧ್ಯಾಪಕ ಡಾ। ಕೆ.ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ಅವರು ಜಿಕೆವಿಕೆಯ ಹಸಿರು ಮನೆಯಲ್ಲಿ ಬೆಳೆದಿರುವ ಬಾಳೆಯ ಜಿ-9 ತಳಿಯನ್ನು ಪರಿಶೀಲಿಸಿದರು.

ಸಮಗ್ರ ಬೇಸಾಯ ಸೇರಿ ಹಲವು ಮಾಹಿತಿ ಲಭ್ಯ

ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿ, ಸಮಗ್ರ ಬೇಸಾಯ, ಔಷಧೀಯ ಮತ್ತು ಸುಗಂಧದ್ರವ್ಯ ಸಸ್ಯಗಳು, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿ, ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ, ಹನಿ ಮತ್ತು ತುಂತುರು ನೀರಾವರಿ ಪದ್ಧತಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ರಾಜೇಂದ್ರ ಪ್ರಸಾದ್ ಹೇಳಿದರು.

ವಸ್ತು ಪ್ರದರ್ಶನದಲ್ಲಿ 450 ಮಳಿಗೆ

ಕೃಷಿ ವಿವಿಗಳು, ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳು, ಕೃಷಿ ಪರಿಕರ ಉತ್ಪಾದಕರ 450 ಮಳಿಗೆಗೆ ಅವಕಾಶ ನೀಡಲಾಗಿದ್ದು, ವಸ್ತು ಪ್ರದರ್ಶನವನ್ನೂ ಏರ್ಪಡಿಸಲಾಗುವುದು. ತಾರಸಿ ಕೃಷಿ ಬಗ್ಗೆ ಮೇಳದಲ್ಲಿ ಮಾಹಿತಿ ನೀಡುವ ಜೊತೆಗೆ ಪರಿಕರ ಮಾರಾಟ ಮಳಿಗೆಗಳೂ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ. ಪ್ರತಿದಿನ 15 ರಿಂದ 20 ಸಾವಿರ ಜನರು ಮೇಳಕ್ಕೆ ಭೇಟಿ ನೀಡುವ ಅಂದಾಜಿದೆ ಎಂದು ರಾಜೇಂದ್ರ ಪ್ರಸಾದ್ ಅಭಿಪ್ರಾಯಪಟ್ಟರು.

ರಾಜ್ಯ ಮಟ್ಟದ ಪ್ರಶಸ್ತಿಗಳಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಪ್ರಶಸ್ತಿಗೆ ಹಾಸನ ಜಿಲ್ಲೆಯ ಅರಕಲಗೂಡಿನ ದೊಡ್ಡಮಗ್ಗೆಯ ಎಂ.ಸಿ. ರಂಗಸ್ವಾಮಿ, ಡಾ। ಎಂ.ಎಚ್.ಮರೀಗೌಡ ತೋಟಗಾರಿಕಾ ರೈತಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರದ ದೊಡ್ಡ ತುಮಕೂರಿನ ಟಿ. ಎಂ.ಅರವಿಂದ, ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಹಾಸನ ಜಿಲ್ಲೆ ಆಲೂರು ತಾಲೂಕಿನ ಯಡೂರಿನ ವೈ.ಜಿ.ಮಂಜುಳಾ ಆಯ್ಕೆಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

₹1 ಕೋಟಿ ಮೌಲ್ಯದ ಹಳ್ಳಿಕಾರ್ ಹೋರಿ



ಮಳವಳ್ಳಿಯ ಹಳ್ಳಿಕಾರ್ ತಳಿಯ ₹1 ಕೋಟಿ ಮೌಲ್ಯದ ಹೋರಿಯನ್ನು ಕೃಷಿ ಮೇಳದಲ್ಲಿ ಕಣ್ತುಂಬಿಕೊಳ್ಳಬಹುದು.

ತಲಾ ₹3 ಲಕ್ಷ ಬೆಲೆಬಾಳುವದೊಡ್ಡಬಳ್ಳಾಪುರದ ಜಮುನಾ ಪ್ಯಾರಿ ಹೋತಗಳೂ ಮೇಳದ ಆಕರ್ಷಣೆಯಾಗಿವೆ.

ಇನ್ನುಳಿದಂತೆ ಕುರಿ, ಕೋಳಿ, ಮೀನುಗಳ ವಿವಿಧ ತಳಿ, ಕೃಷಿಗೆ ಸಂಬಂಧಿಸಿದ ಪರಿಕರಗಳ ವೀಕ್ಷಣೆಗೂ ಮೇಳದಲ್ಲಿ ಅವಕಾಶವಿದೆ. ಡ್ರೋನ್ ಮೂಲಕ ಔಷಧಿ ಸಂಪಡಿಸುವ ಪ್ರಾತ್ಯಕ್ಷಿಕೆಯನ್ನೂ ನೀಡಲಾಗುವುದು.

ಸಿಎಂ ಬೊಮ್ಮಾಯಿ ಚಾಲನೆ | ವಿವಿ ಕುಲಪತಿ ಪ್ರೊ.ಎಸ್. ರಾಜೇಂದ್ರ ಪ್ರಸಾದ್ ಮಾಹಿತಿ

ನಾಳೆಯಿಂದ ಜಿಕೆವಿಕೆಯಲ್ಲಿ ಕೃಷಿಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗುರುವಾರದಿಂದ ಭಾನುವಾರ ವರೆಗೆ (ನ.11ರಿಂದ 14) ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) 'ಕೃಷಿಮೇಳ-2021' ಆಯೋಜಿಸಿಲಾಗಿದೆ ಎಂದು ಬೆಂ. ಕೃಷಿ ವಿವಿ ಕುಲಪತಿ ಪ್ರೊ.ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಗುರುವಾರ (ನ. 11) ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೃಷಿ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಕೃಷಿ ಸಚಿವ ಬಿ.ಸಿ. ಪಾಟೀಲ್, ಶಾಸಕ ಕೃಷ್ಣ ಬೈರೇಗೌಡ, ಸಚಿವರಾದ ಎಸ್.ಟಿ. ಸೋಮಶೇಖರ್, ಡಾ.ಕೆ. ಸುಧಾಕರ್, ಸಂಸದ ಬಿ.ಎನ್. ಬಚ್ಚೇಗೌಡ ಇತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕೃಷಿ ಕ್ಷೇತ್ರದಲ್ಲಿನ ಗಣನೀಯ ಸಾಧನೆಗೆ 7 ರಾಜ್ಯಮಟ್ಟದ ಪ್ರಶಸ್ತಿ, 10 ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿ ಹಾಗೂ 61 ತಾಲ್ಲೂಕು ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



» ಸಾಮಾಜಿಕ ಜಾಲತಾಣದಲ್ಲಿ ವೀಕ್ಷಣೆಗೆ ಅವಕಾಶ

ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ರೈತರ ಆದಾಯ ದ್ವಿಗುಣಗೊಳಿಸುವ ಕೃಷಿ ತಂತ್ರಜ್ಞಾನ, ಸುಧಾರಿತ ಬೇಸಾಯ, ಮಾರುಕಟ್ಟೆ, ಮೌಲ್ಯವರ್ಧನೆ ಬಗ್ಗೆ ಮಾಹಿತಿ ನೀಡಲಾಗುವುದು. ಈ ಬಾರಿ ವಸ್ತು ಪ್ರದರ್ಶನದಲ್ಲಿ 250 ಮಳಿಗೆಗಳು ಇರಲಿವೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆನ್‌ಲೈನ್‌ನಲ್ಲಿ ನೇರಪ್ರಸಾರ: ಜಿಕೆವಿಕೆ ಮುಖ್ಯದ್ವಾರದಿಂದ ಕೃಷಿ ಮೇಳದ ಸಂಭಾಗಣದವರೆಗೆ ಉಚಿತ ವಾಹನ ವ್ಯವಸ್ಥೆ ಇರುತ್ತದೆ. ಆಂಗ್ಲೆಯಲ್ಲಿ ಕೃಷಿಮೇಳ ವೀಕ್ಷಣೆಗೆ ಅನುಕೂಲವಾಗುವಂತೆ ವೆಬ್ ಪೇಜ್, ವೆಬ್‌ಸೈಟ್, ಯುಟ್ಯೂಬ್, ಫೇಸ್‌ಬುಕ್ ಮತ್ತು ಜೂಮ್ ಸಭೆಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನೇರಪ್ರಸಾರ ವೀಕ್ಷಿಸಬಹುದು ಎಂದು ತಿಳಿಸಿದರು.

ಮೇಳದಲ್ಲಿ ರೈತರ ಚರ್ಚಾಗೋಷ್ಠಿ, ನೂತನ ತಳಿಗಳ ಪ್ರಾತ್ಯಕ್ಷಿಕೆ, ಸಾವಯವ ಕೃಷಿ ಪದ್ಧತಿ, ರೈತರ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಕೊಯ್ಲೋತ್ತರ ತಾಂತ್ರಿಕತೆ, ಹೈನುಗಾರಿಕೆ, ಕುರಿ, ಕೋಳಿ ಮತ್ತು ಮೀನು ಸಾಕಾಣಿಕೆ, ಸಮಗ್ರ ಬೇಸಾಯ ಪದ್ಧತಿ, ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷಿಕೆ ಸೇರಿ ಹಲವು ಮಾಹಿತಿಗಳನ್ನು ಪಡೆಯಲು ಕೃಷಿಮೇಳ ಸೂಕ್ತ ವೇದಿಕೆಯಾಗಿದೆ. ಬೀಜ ಮತ್ತು ಕೃಷಿ ಯಂತ್ರೋಪಕರಣಗಳನ್ನು ಸಬ್ಸಿಡಿ ಆಧಾರದಲ್ಲಿ ಖರೀದಿಸಬಹುದು ಎಂದರು.



ಕೃಷಿಮೇಳ ಆಂಗವಾಗಿ ಜಿಕೆವಿಕೆಯಲ್ಲಿ ಬೆಳೆಸಲಾಗಿರುವ ಸೂರ್ಯಕಾಂತಿ ಬೆಳೆಯ ಪ್ರಾತ್ಯಕ್ಷಿಕೆಗೆ ಸಿದ್ಧತೆ.



ಚಿತ್ರಗಳು: ರಾಘವೇಂದ್ರ ಸಿ.

ರಾಗಿ ತಳಿ ತೋರಿಸುತ್ತಿರುವ ಕುಲಪತಿ ಡಾ.ರಾಜೇಂದ್ರಪ್ರಸಾದ್ ಮತ್ತಿತರರು.

ಬೆಂಕಿರೋಗ ನಿರೋಧಕ ಕೆಂಪಕ್ಕಿ ಭತ್ತ

ಕೆಎಂಪಿ-220 ಭತ್ತವು ಹೊಸ ತಳಿಯಾಗಿದ್ದು, 125ರಿಂದ 130 ದಿನಗಳಲ್ಲಿ ಕೊಯ್ಲು ಮಾಡಬಹುದು. ಎಕರೆಗೆ 26 ಕ್ವಿಂಟಾಲ್ ಧಾನ್ಯ ಹಾಗೂ 32 ಕ್ವಿಂಟಾಲ್ ಮೇವು ಬರಲಿದೆ. ಆಗಸ್ಟ್ ಮೊದಲ ವಾರದೊಳಗೆ ನಾಟಿ ಮಾಡಲು ಸೂಕ್ತವಾಗಿದೆ. ಅಕ್ಕಿ ಕೆಂಪಾಗಿರಲಿದ್ದು ಉದ್ದ ಮತ್ತು ದಪ್ಪವಾಗಿರುತ್ತದೆ. ಈ ತಳಿಯು ಬೆಂಕಿರೋಗ ನಿರೋಧಕ ಶಕ್ತಿಯನ್ನೂ ಹೊಂದಿದೆ. ಇನ್ನೊಂದು ಹೊಸ ತಳಿ ಎಂಎಸ್‌ಎನ್99 ಭತ್ತದ ಅಕ್ಕಿಯು ಮಧ್ಯಮ ಸಣ್ಣದಾಗಿದ್ದು, ಊಟಕ್ಕೆ ರುಚಿಕರವಾಗಿದೆ. 3 ತಿಂಗಳಲ್ಲಿ ಕೊಯ್ಲಿಗೆ ಬರಲಿದ್ದು, ಪ್ರತಿ ಎಕರೆಗೆ 27 ಕ್ವಿಂಟಾಲ್ ಭತ್ತದ ಧಾನ್ಯ ಹಾಗೂ 30 ಕ್ವಿಂಟಾಲ್ ಮೇವು ಬರಲಿದೆ.

ಮುಂಗಾರು, ತಡವಾದ ಮುಂಗಾರು ಮತ್ತು ಬೇಸಿಗೆ ಹಂಗಾಮಿಗೆ ಸೂಕ್ತವಾಗಿದ್ದು, ಗಟ್ಟಿ ಕಾಂಡ ಮತ್ತು ನೇರವಾಗಿ ಬೆಳೆಯುವ ಗುಣ ಹೊಂದಿದೆ. ಬೆಳೆಯ ಎತ್ತರ 110 ಸೆಂ.ಮೀ. ಉದ್ದವಿರುತ್ತದೆ ಎಂದು ಕೃಷಿ ವಿವಿ ಕುಲಪತಿ ಮಾಹಿತಿ ನೀಡಿದರು.

ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತರು

- ಎಚ್.ಡಿ. ದೇವೇಗೌಡ ಅತ್ಯುತ್ತಮ ರೈತ: ಎಂ.ಸಿ.ರಂಗಸ್ವಾಮಿ, ಹಾಸನ
- ಡಾ.ಎಂ.ಎಚ್. ಮರೀಗೌಡ ಅತ್ಯುತ್ತಮ ತೋಟಗಾರಿಕಾ ರೈತ: ಟಿ.ಎಂ. ಅರವಿಂದ, ಬೆಂ.ಗ್ರಾ.
- ಕೆನರಾ ಬ್ಯಾಂಕ್ ಅತ್ಯುತ್ತಮ ರೈತ ಮಹಿಳೆ: ವೈ.ಜಿ. ಮಂಜುಳಾ, ಹಾಸನ
- ಕೆನರಾ ಬ್ಯಾಂಕ್ ಅತ್ಯುತ್ತಮ ರೈತ: ಸಿ. ನವಿಕ್ರಮ್, ಬೆಂ.ಗ್ರಾ.
- ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ: ಮುನಿರೆಡ್ಡಿ, ಕೋಲಾರ
- ಡಾ.ಆರ್. ದ್ವಾರಕೀನಾಥ್ ವಿಸ್ತರಣಾ ಕಾರ್ಯಕರ್ತ: ಡಾ.ಎ.ಪಿ. ಮಲ್ಲಿಕಾರ್ಜುನಗೌಡ
- ಡಾ.ಎಂ.ಎಚ್. ಮರೀಗೌಡ ತೋಟಗಾರಿಕಾ ಸಂಶೋಧನಾ ಪ್ರಶಸ್ತಿ: ಡಾ.ಎಚ್.ಪಿ. ಮಹೇಶ್ವರಪ್ಪ.



ಹತ್ತು ನೂತನ ತಳಿಗಳ ಅಭಿವೃದ್ಧಿ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 10 ಹೊಸ ತಳಿಗಳ ಪ್ರಾತ್ಯಕ್ಷಿಕೆಯನ್ನು ರೈತರು ಕೃಷಿ ಮೇಳದಲ್ಲಿ ವೀಕ್ಷಿಸಬಹುದು. ಭತ್ತ (ಕೆಎಂಪಿ-220 ಮತ್ತು ಎಂಎಸ್‌ಎನ್-99), ರಾಗಿ (ಕೆಎಂಆರ್-316), ನವಣೆ (ಜಿಪಿಯುಎಫ್-3), ಸಾಮೆ (ಜಿಪಿಯುಎಲ್-6), ಬರಗು (ಜಿಪಿಯುಪಿ-28), ಬೀಜದ ದಂಟು (ಕೆಬಿಜಿಎ-15), ಕಬ್ಬು (ಸಿಒವಿಸಿ-18061) ಹಲಸು (ಬೈರಚಂದ್ರ), ಮೇವಿನ ತೋಕೆ ಗೋಧಿ (ಆರ್ಒ-11-1) ನೂತನ ತಳಿಗಳಾಗಿವೆ. ಜತೆಗೆ 28 ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲ ತಳಿಗಳು ಹಿಂದಿನ ತಳಿಗಳಿಗಿಂತ ಶೇ.10 ಹೆಚ್ಚು ಇಳುವರಿ ಸಾಮರ್ಥ್ಯ ಹೊಂದಿದ್ದು, ಬೇಗನೆ ರೋಗಕ್ಕೆ ತುತ್ತಾಗುವುದಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಮೇಳ ವೀಕ್ಷಿಸಲು ಲಿಂಕ್

ವೆಬ್‌ಪೇಜ್: https://uasbangalore.edu.in/index.php/krishimela-2021-en
ವೆಬ್‌ಸೈಟ್: https://www.uasbangalore.edu.in
ಯೂಟೂಬ್: https://www.youtube.com/c/UASBangaloreGKVK
ಫೇಸ್‌ಬುಕ್: https://www.facebook.com/sis.uasb/
ಟ್ವಿಟರ್: https://twitter.com/BangaloreUas
ಇನ್‌ಸ್ಟಾಗ್ರಾಮ್: https://www.instagram.com/uasbangalore1964/?hl=en
ಜೂಮ್: https://bit.ly/3CNVMCR ID: 3765459767 Passcode: 22121





ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆವರಣದಲ್ಲಿ ಬೆಳೆಸಲಾಗಿರುವ ಜೋಳದ ದಂಟು ಕಟಾವು ಮಾಡುತ್ತಿರುವ ಮಹಿಳೆಯರು.

ಪ್ರತಿ ಎಕರೆಗೆ 70 ಟನ್ ಕಬ್ಬು ಇಳುವರಿ

ಕೃಷಿ ವಿವಿ ಅಭಿವೃದ್ಧಿಪಡಿಸಿದ ಸಿಒವಿಸಿ 18061 ಕಬ್ಬಿನ ತಳಿ ಪ್ರಸ್ತುತ ಬೆಳೆಯುತ್ತಿರುವ ಕಬ್ಬುಗಳಿಗಿಂತ ಉತ್ತಮ ಇಳುವರಿಯನ್ನು ಕೊಡುತ್ತದೆ. ಒಂದು ವರ್ಷಕ್ಕೆ ಕಟಾವಿಗೆ ಬರಲಿದ್ದು, ಪ್ರತಿ ಎಕರೆಗೆ 60ರಿಂದ 70 ಟನ್ ಇಳುವರಿ ಬರಲಿದೆ. ಕೂಳೆ ಬೆಳೆಯಲ್ಲಿ ಪ್ರತಿ ಎಕರೆಗೆ 60 ಟನ್ ಇಳುವರಿ ಬರುತ್ತದೆ. ಈ ಕಬ್ಬು ಜನವರಿ- ಫೆಬ್ರವರಿ ತಿಂಗಳಲ್ಲಿ ನಾಟಿಗೆ ಯೋಗ್ಯವಾಗಿದೆ ಎಂದು ರಾಜೇಂದ್ರ ಪ್ರಸಾದ್ ತಿಳಿಸಿದರು.

ಅಡಕೆ ಬೆಳೆಗಾರರ ಭಾವನೆಗೆ ಧಕ್ಕೆ

ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್ ಕುಮಾರ್ ಕೊಡ್ಗಿ ಹೇಳಿಕೆ

ಮಂಗಳೂರು: ಅಡಕೆ ಹಾನಿಕಾರಕ ಎಂಬ ಜಾರ್ಜ್ ಟಿಂಡ್ ನಂಸದ ನಿಶಿಕಾಂತ ದುಬೆ ಅವರ ಹೇಳಿಕೆ ಜನರನ್ನು ತಪ್ಪು ದಾರಿಗೆಳೆಯುವ ಪ್ರಯತ್ನ. ಅವರ ಈ ವೈಜ್ಞಾನಿಕ ಪುರಾವೆ ಇಲ್ಲದ ಹೇಳಿಕೆ ಅಡಕೆ ಬೆಳೆಗಾರರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್ ಕುಮಾರ್ ಕೊಡ್ಗಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಸ್.ಎಂ.ಕೃಷ್ಣ ಕುಮಾರ್ ತಿಳಿಸಿದ್ದಾರೆ.



ಅಡಕೆ ಎಲ್ಲ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಮಹತ್ವದ ಸ್ಥಾನ ಪಡೆದಿದೆ. ಭಾರತ ವಿಶ್ವದಲ್ಲೇ ಅತಿ ಹೆಚ್ಚು ಅಡಕೆ ಬೆಳೆಯುವ ದೇಶ. ಕ್ಯಾಂಪ್ಕೊ ಅಡಕೆ ಬೆಳೆಗಾರರ ಹಿತ ಕಾಪಾಡುವ ಏಜೆಕ ಸಿಲುವು ಹೊಂದಿದೆ. ಅಡಕೆಯ ಆರೋಗ್ಯ ಪ್ರಯೋಜನಗಳ ಕುರಿತು ಸಂಪೂರ್ಣ ವೈಜ್ಞಾನಿಕ ಸಂಶೋಧನೆಗೆ ಸಂಬಂಧಪಟ್ಟ ಇಲಾಖೆಗೆ ಪ್ರಧಾನ ಮಂತ್ರಿ ಸೂಚನೆ ನೀಡಬೇಕು ಎಂದು ಕ್ಯಾಂಪ್ಕೊ ಸಂಸ್ಥೆ ವಿನಂತಿಸಿದೆ.

ಅಡಕೆ ಕ್ಯಾನ್ಸರ್‌ಕಾರಕ ಅಲ್ಲ ಎಂಬುದು ಸಾಬೀತಾಗಿದೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ಸಮರ್ಥ ಸಂಶೋಧನಾ ಸಂಸ್ಥೆಗಳು ನಡೆಸಿದ ಸಂಶೋಧನೆಗಳು ಸಕಾರಾತ್ಮಕ ಫಲಿತಾಂಶಗಳನ್ನು ಸಾಬೀತುಪಡಿಸಿವೆ. 1974ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಅಡಕೆ ಕ್ಯಾನ್ಸರನ್ನು ಗುಣಪಡಿಸುತ್ತದೆ ಎಂದು ವರದಿ ನೀಡಿದ್ದರು. ಚೀನಾದಲ್ಲಿ ಅಡಕೆ ಬಳಸಿ 30ಕ್ಕೂ ಹೆಚ್ಚು ಔಷಧಗಳನ್ನು ತಯಾರಿಸಲಾಗಿದೆ. ಆಹಾರ ಕಲಬೆರಕೆ ತಡೆ ಕಾಯ್ದೆಯಲ್ಲಿ ಅಡಕೆ ಆಹಾರ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಅಡಕೆ ಮನುಷ್ಯರಿಗೆ ಮತ್ತು ಜಾನುವಾರುಗಳಿಗೆ ಬೇಕಾದ ಔಷಧೀಯ ಗುಣಗಳನ್ನು ಹೊಂದಿರುವ ಪದಾರ್ಥ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್ ಕುಮಾರ್ ಕೊಡ್ಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಡಕೆ ಕಾರ್ಯಪಡೆಯಿಂದ ಜಾರ್ಜ್‌ಟಿಂಡ್ ಟೋಕಸಭಾ ಸದಸ್ಯ ನಿಶಿಕಾಂತ್ ದುಬೆ ಅವರಿಗೆ ಪತ್ರ ಬರೆಯಲಿದ್ದು, ಅವರು ಪ್ರಧಾನಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿರುವಂತೆ ಅಡಕೆಯಲ್ಲಿ ಹಾನಿಕಾರಕ ಅಂಶಗಳಿರುವ ಬಗ್ಗೆ ವೈಜ್ಞಾನಿಕ ಪರವಿ ನೀಡುವಂತೆ ಸಚಾಲು ಹಾಕುತ್ತೇನೆ.

| ಅರಗ ಜ್ಞಾನೇಂದ್ರ ಅಡಕೆ ಕಾರ್ಯಪಡೆ ಅಧ್ಯಕ್ಷ



ಶಿವಮೊಗ್ಗದಲ್ಲಿ ರಾಜ್ಯ ಅಡಕೆ ಮಾರಾಟ ಸಹಕಾರ ಮಹಾಮಂಡಳದ ಸರ್ವ ಸಾಧಾರಣ ಸಭೆ ನ.11ರಂದು ನಡೆಯಲಿದ್ದು, ಅಡಕೆ ನಿಷೇಧ ಕುರಿತು ಜಾರ್ಜ್‌ಟಿಂಡ್‌ನ ಟೋಕಸಭಾ ಸದಸ್ಯ ನಿಶಿಕಾಂತ್ ದುಬೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದಿರುವ ಪತ್ರದ ಬಗ್ಗೆ ಈ ಸಭೆಯಲ್ಲಿ ಚರ್ಚೆಗೆ ಸಲಾಗುವುದು.

| ಎಚ್.ಎಸ್.ಮಂಜಪ್ಪ ರಾಜ್ಯ ಅಡಕೆ ಮಾರಾಟ ಸಹಕಾರ ಮಹಾಮಂಡಳದ ಮಾಜಿ ಅಧ್ಯಕ್ಷ



ಅಡಕೆ ಕರಾವಳಿ ಕರ್ನಾಟಕ ನೀರಿ ಹಲವು ಪ್ರದೇಶದ ಪ್ರಮುಖ ವಾಣಿಜ್ಯ ಬೆಳೆ. ಅಡಕೆ ಕ್ಯಾನ್ಸರ್‌ಕಾರಕ ಎಂಬ ಓರ್ವ ಜನಪ್ರತಿನಿಧಿಯ ಆಧಾರರಹಿತ ಹೇಳಿಕೆ ಹಾಗೂ ಮನವಿಗೆ ಸರ್ಕಾರ ತಲೆಕೆಡಿಸಿಕೊಳ್ಳುವ ಆಗತ್ಯ ಇಲ್ಲ. ಅಡಕೆ ಕ್ಯಾನ್ಸರ್‌ಕಾರಕ ಎಂಬುದಕ್ಕೆ ಆಧಾರ ಇಲ್ಲ. ಒಂದು ವೇಳೆ ಸರ್ಕಾರ ಅಡಕೆ ನಿಷೇಧ ಜಾರಿ ಮಾಡಿದರೆ ಇದರಿಂದ ದೇಶದ ಆರ್ಥಿಕತೆಗೆ ಹೊಡೆತ ಬೀಳಲಿದೆ. ಅಡಕೆ, ಅಡಕೆ ಬೆಳೆಗಳ ಬಗ್ಗೆ ಸಮಗ್ರ ಸಂಶೋಧನೆಗೆ ಸರ್ಕಾರ ಮುಂದಾಗಬೇಕು. ಕೃಷಿ ಹಾಗೂ ವಾಣಿಜ್ಯ ಮಾರುಕಟ್ಟೆ ತಜ್ಞರ ಸಮಗ್ರ ವರದಿ ಪಡೆದು ಅಡಕೆ ಬಗೆಗಿನ ಅಪಪ್ರಚಾರಕ್ಕೆ ತೆರೆ ಎಳೆಯಬೇಕು.

| ಡಾ.ವಿಘ್ನೇಶ್ವರ ವರ್ಮುಡಿ ಕೃಷಿ ಮಾರುಕಟ್ಟೆ ತಜ್ಞ, ಪುತ್ತೂರು, ದ.ಕ.

ಸಂಶೋಧನೆ ಸಾರ ತಿಳಿಸುವ ಕೃಷಿಮೇಳಕ್ಕೆ ಸಿದ್ಧತೆ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಯಾದ ಹೊಸ ತಂತ್ರಜ್ಞಾನಗಳು ಮತ್ತು ಕೃಷಿ ಕ್ಷೇತ್ರದಲ್ಲಿ ಆದ ನೂತನ ಆವಿಷ್ಕಾರಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲು ಮತ್ತು ಸಕಾಲದಲ್ಲಿ ಅವು ತಲುಪಬೇಕೆಂಬ ಉದ್ದೇಶದಿಂದ ಕೃಷಿ ಮೇಳವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಇದೇ ನ.11, 12, 13 ಮತ್ತು 14 ರಂದು ಹಮ್ಮಿಕೊಂಡಿದೆ.

ಮೇಳದಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೃಷಿ ವಿಜ್ಞಾನಿಗಳು ಕಂಡು ಹಿಡಿದಿರುವ 10 ಹೊಸ ತಳಿಗಳು ಮತ್ತು 28 ತಂತ್ರಜ್ಞಾನಗಳ ಬಗ್ಗೆ ರೈತರಿಗೆ ವೈಜ್ಞಾನಿಕವಾಗಿ ತಿಳಿಸಿಕೊಟ್ಟು, ಅವುಗಳನ್ನು ಬಳಕೆ ಮಾಡುವುದರಿಂದ ಆದಾಯ ಹೆಚ್ಚಾಗುವ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಲಾಗುವುದು ಎಂದು ಕೃಷಿ ವಿವಿ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನ.11 ರಂದು ಬೆಳಿಗ್ಗೆ 11 ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ದೇಸಿ ಮತ್ತು ರಾಜ್ಯದಲ್ಲಿ ಕೇ.83 ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರು ಇದ್ದು, ಅವರು ಹೆಚ್ಚು ಕೃಷಿ ಉಪಕರಣಗಳನ್ನು ಬಳಕೆ ಮಾಡುವ ನಿಟ್ಟಿನಲ್ಲಿ ಪೆಚ್ಚಿನ ಗಮನ ಹರಿಸಲಾಗುತ್ತಿದೆ. ಕೃಷಿ ಇಳುವರಿ ಹೆಚ್ಚಿಸುವುದು ಮಾತ್ರವೇ ಅಲ್ಲ, ಉತ್ಪಾದನೆ ಹೆಚ್ಚ ತಗ್ಗಿಸುವುದು, ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಒದಗಿಸಿ, ಉತ್ತಮ ಬೆಲೆಯನ್ನು ದೊರಕಿಸಿ ಕೊಡುವುದಕ್ಕೂ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ರೋಗ ನಿರೋಧಕ ಶಕ್ತಿ ಹೆಚ್ಚಿರುವ :ರೋಗ ನಿರೋಧಕ ಶಕ್ತಿ ಪೆಚ್ಚಿಸುವ, ಇಳುವರಿ ಪೆಚ್ಚು ನೀಡುವ ನೂತನ ಕೆಎಂ-ಪಿ-220 ಭತ್ತ, ರಾಗಿ, ಬರಗು,ನವಣೆ, ಸಾಮೆ, ಬೀಜದ ದಂಟು, ಕಬ್ಬು ಮತ್ತು ವರ್ಷಕ್ಕೆ 2 ಬಾರಿ ಹಣ್ಣು ಬಿಡುವ ಹಲಸು ಬೈರಚಂದ್ರ ಹಾಗೂ ಮೇವಿನ ತೋಕೆ ಗೋಧಿ ತಳಿಗಳನ್ನು ಈ ಬಾರಿ ಅವಿಷ್ಕಾರ ಮಾಡಲಾಗಿದೆ ಎಂದು ವಿವರಿಸಿದರು.

ಅಂಗೈಯಲ್ಲೇ ಕೃಷಿ ಮೇಳ: ಈ ಬಾರಿ ರೈತರು ನೇರವಾಗಿ ಭಾಗವಹಿಸುವುದರ ಜೊತೆಗೆ ತಾವಿರುವಲ್ಲಿಯೇ ಕೃಷಿ ಮೇಳವನ್ನು ವೀಕ್ಷಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ವೆಬ್‌ಪೇಜ್, ವೆಬ್‌ಸೈಟ್, ಯೂಟ್ಯೂಬ್, ಫೇಸ್‌ಬುಕ್, ಟ್ವಿಟ್ಟರ್, ಇನ್ಸ್ಟಾಗ್ರಾಮ್ ಮತ್ತು ಜೂಮ್ ಸಭೆ ಮೂಲಕ ನೇರ ಪ್ರಸಾರ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮೇಳದಲ್ಲಿ ಏನೇನು ಇರುತ್ತೆ ?: ರಾಜ್ಯ ಮಟ್ಟದ ಪ್ರಶಸ್ತಿಗಳ ಘೋಷಣೆ

ಕೃಷಿ ಮೇಳದಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ ರೈತರಿಗೆ,ವಿಜ್ಞಾನಿಗಳಿಗೆ ಮತ್ತು ವಿಸ್ತರಣಾ ಕಾರ್ಯಕರ್ತರಿಗೆ ನೀಡುವ ಪ್ರಶಸ್ತಿಗಳನ್ನು ಘೋಷಣೆ ಮಾಡಲಾಯಿತು. ಮಾಜಿ ಪ್ರಧಾನಮಂತ್ರಿ, ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಹಾಸನ ಜಿಲ್ಲೆ ದೊಡ್ಡಮಗ್ಗೆಯ ಎಂ.ಸಿ. ರಂಗಸ್ವಾಮಿ ಅವರಿಗೆ, ಡಾ. ಎಂ.ಎಚ್.ಮರೀಗೌಡರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿಯನ್ನು ದೊಡ್ಡ ತುಮಕೂರಿನ ಟಿ.ಎಂ.ಅರವಿಂದ ಅವರಿಗೆ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳಾ ಪ್ರಶಸ್ತಿಯನ್ನು ಹಾಸನ ಜಿಲ್ಲೆ ಆಲೂರು ತಾಲೂಕಿನ ಯಡೆಹಳ್ಳಿ ಗ್ರಾಮದ ಕುಮಾರಿ ವೈ.ಜಿ. ಮಂಜುಳ ಅವರಿಗೆ ಮತ್ತು ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಯನ್ನು ದೊಡ್ಡಬಳ್ಳಾಪುರ ತಾಲೂಕು ಲಕ್ಷ್ಮದೇವಿಪುರದ ಸಿ. ನವಿಕ್ರಮ್ ಅವರಿಗೆ ನೀಡಲಾಗಿದೆ.

10-11-2021 Sk Pg 08
10-11-2021 Vv Pg 12

ನಾಳೆಯಿಂದ 4 ದಿನ ಕೃಷಿ ಮೇಳ

ಮೇಳದಲ್ಲಿ 10 ಹೊಸ ತಳಿಗಳು, ಕೃಷಿ ಆಧಾರಿತ 28 ತಂತ್ರಜ್ಞಾನಗಳ ಪರಿಚಯ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ನ.11ರಿಂದ 14ರವರೆಗೆ 2021ನೇ ಸಾಲಿನ ಕೃಷಿ ಮೇಳ ಆಯೋಜಿಸಿದೆ. ಈ ಬಾರಿಯ ಮೇಳದಲ್ಲಿ ಹತ್ತು ಹೊಸ ತಳಿಗಳು ಹಾಗೂ ಕೃಷಿ ಆಧಾರಿತ 28 ತಂತ್ರಜ್ಞಾನಗಳನ್ನು ಪರಿಚಯಿಸಲಿದೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ಯಲ್ಲಿ ನಡೆಯಲಿರುವ ಮೇಳವನ್ನು ನ.11ರಂದು ಗುರುವಾರ ಬೆಳಗ್ಗೆ 11 ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದು ಕೃಷಿ ಸಚಿವ ಬಿ.ಸಿ. ಪಾಟೀಲ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶಾಸಕ ಕೃಷ್ಣ ಬೈರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನ.14ರಂದು ಮಧ್ಯಾಹ್ನ 2.30ಕ್ಕೆ ನಡೆಯಲಿರುವ ಸಮಾರೋಪದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕೇಂದ್ರದ ಮಾಜಿ ಸಚಿವ ಡಿ.ವಿ. ಸದಾನಂದಗೌಡ ಪಾಲ್ಗೊಳ್ಳಲಿದ್ದಾರೆ. ಮೇಳದಲ್ಲಿ ಪ್ರತಿದಿನ 15ರಿಂದ 20 ಸಾವಿರ ರೈತರು ಆಗಮಿಸುವ ನಿರೀಕ್ಷೆ ಹೊಂದಲಾಗಿದೆ. ಮೇಳಕ್ಕೆ ಬರುವವರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದ್ದು ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಕೃಷಿ ಆದಾಯ ಹೆಚ್ಚಿಸುವ ತಾಂತ್ರಿಕತೆ: ರೈತರ ಆದಾಯ ದ್ವಿಗುಣಗೊಳಿಸುವಿಕೆಗೆ ಕೃಷಿ ತಾಂತ್ರಿಕತೆಗಳು ಎಂಬ ಅಡಿ ಬರಹದಲ್ಲಿ ಈ ಬಾರಿ ಮೇಳ ಆಯೋಜಿಸಿದೆ. ರೈತರ ಆದಾಯ ದ್ವಿಗುಣಗೊಳಿಸುವುದು ಕೇವಲ ಬೆಳೆಯಿಂದ ಮಾತ್ರವಲ್ಲ, ಪರಿಕರಗಳನ್ನು ಒದಗಿಸುವುದು, ಇಳುವರಿ ಹೆಚ್ಚಳ ಸೇರಿದಂತೆ ಹಲವು ರೀತಿಯಲ್ಲಿ ರೈತರಿಗೆ ಸರ್ಕಾರ ಪ್ರೋತ್ಸಾಹ ನೀಡುವುದಾಗಿದೆ ಎಂದರು.

ಸಾಧಕರಿಗೆ ಪ್ರಶಸ್ತಿ: ಹಾಸನದ ಅರಕಲಗೂಡು ತಾಲೂಕಿನ ದೊಡ್ಡ ಮಗ್ಗೆ ರೈತ ಎಂ.ಸಿ. ರಂಗಸ್ವಾಮಿ ಅವರಿಗೆ ಎಚ್.ಡಿ. ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಬೆಂ.ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರ ತಾಲೂಕು ದೊಡ್ಡ ತುಮಕೂರು ರೈತ ಟಿ.ಎಂ. ಅರವಿಂದ ಅವರಿಗೆ ಡಾ. ಎಂ.ಎಚ್. ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಹಾಸನ ಜಿಲ್ಲೆ ಆಲೂರು ತಾಲೂಕಿನ ಯಡೂರು ರೈತ ಮಹಿಳೆ ವೈ.ಜಿ. ಮಂಜುಳ ಹಾಗೂ ಬೆಂ. ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಲಕ್ಷ್ಮೀದೇವಿಪುರದ ರೈತ ಸಿ. ವಿಕ್ರಮ್ ಅವರಿಗೆ ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ, ಕೋಲಾರ ಜಿಲ್ಲೆ ಆರಿನಾಗನಹಳ್ಳಿ ರೈತ ಮುನಿರೆಡ್ಡಿ ಅವರಿಗೆ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ ನೀಡಲಾಗುತ್ತಿದೆ. ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಹಿರಿಯ ವಿಜ್ಞಾನಿ ಡಾ. ವಿ.ಪಿ. ಮಲ್ಲಿಕಾರ್ಜುನಗೌಡ ಅವರಿಗೆ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ಹಾಗೂ ಬಾಗಲಕೋಟೆ ತೋಟಗಾರಿಕಾ ವಿವಿ ಸಂಶೋಧನಾ ನಿರ್ದೇಶಕರಾದ ಡಾ. ಎಚ್.ಸಿ. ಮಹೇಶ್ವರಪ್ಪ ಅವರಿಗೆ ಡಾ. ಎಂ.ಎಚ್. ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಇದರ ಜೊತೆಗೆ ಕೃಷಿ ವಿವಿ ವ್ಯಾಪ್ತಿಯಲ್ಲಿರುವ 10 ಜಿಲ್ಲೆಗಳಲ್ಲಿ ಆರ್ಹ ರೈತರಿಗೆ ಪ್ರಗತಿಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಅದೇ ರೀತಿ ವಿವಿ ವ್ಯಾಪ್ತಿಯಲ್ಲಿರುವ 61 ತಾಲೂಕುಗಳಲ್ಲಿ ಪ್ರಗತಿಪರ ಯುವ ರೈತ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

450 ಮಳಿಗೆಗಳಿಗೆ ಅವಕಾಶ: ಕೊರೊನಾ ಕಾರಣದಿಂದ ಕೇವಲ 450 ಮಳಿಗೆಗಳಿಗೆ ಅವಕಾಶ ನೀಡಲಾಗಿದೆ. ಮಳಿಗೆ ಹಾಕುವವರನ್ನು ಪ್ರೋತ್ಸಾಹಿಸಲು ಶೇ.50 ಶುಲ್ಕ ಕಡಿತ ಮಾಡಲಾಗಿದೆ.

ಕೃಷಿ ಸಮಸ್ಯೆಗಳಿಗೆ ತಜ್ಞರಿಂದ ವೈಜ್ಞಾನಿಕ ಸಲಹೆ: ರೈತರು ಕೇಳುವ ಕೃಷಿ ಸಂಬಂಧಿ ಪ್ರಶ್ನೆಗಳಿಗೆ ಭೌತಿಕವಾಗಿ ಮತ್ತು ವರ್ಚುಯಲ್ (ಜೂಮ್) ಮೂಲಕವೂ ನೇರ ಉತ್ತರ ಕೊಡಿಸಲಾಗುತ್ತಿದೆ. ರೈತರು ತಮ್ಮ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದು.

ಬೆಳಗ್ಗೆ 9- 6 ರವರೆಗೆ ನೇರ ಪ್ರಸಾರ: ಮೇಳಕ್ಕೆ ಆಗಮಿಸಲು ಸಾಧ್ಯವಾಗದ ರೈತರಿಗೆ ಆನ್‌ಲೈನ್ ಮೂಲಕ ನೇರ ಪ್ರಸಾರ ಮಾಡಲಾಗುತ್ತಿದೆ. ಸಾಮಾಜಿಕ ತಾಣ ಮತ್ತು ಜೂಮ್ ಮೂಲಕ ನೇರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು. ಸಂಶೋಧನಾ ನಿರ್ದೇಶಕ ಡಾ. ವೈ.ಜಿ. ಷಡಕ್ಷರಿ ಮತ್ತು ವಿಸ್ತರಣಾ ನಿರ್ದೇಶಕ ಡಾ. ಎನ್. ದೇವಕುಮಾರ್ ಉಪಸ್ಥಿತರಿದ್ದರು.



ಜಿಕೆವಿಕೆ ಕೃಷಿ ವಿವಿಯಲ್ಲಿ ಕೃಷಿ ಮೇಳದ ಅಂಗವಾಗಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಸುದ್ದಿಗೋಷ್ಠಿ ನಡೆಸಿದರು.

ಹೊಸ ತಳಿಗಳ ಪರಿಚಯ

ವಿವಿಯು ಈ ಬಾರಿ ನೂತನವಾಗಿ ಹತ್ತು ಹೊಸ ತಳಿಗಳ ಬೆಳೆಗಳನ್ನು ಪರಿಚಯಿಸುತ್ತಿದೆ. ಜ್ಯೋತಿ ತಳಿಯನ್ನು ಹೋಲುವ ಕೆಎಂಪಿ-220 ತಳಿ ಭತ್ತ, ಎಂಎಸ್ಎನ್-99 ತಳಿ ಭತ್ತ, ಕೆಎಂಆರ್-316 ತಳಿ ರಾಗಿ, ಜಿಪಿಯುಬಿ-28 ತಳಿಯ ಬರಗು, ಜಿಪಿಯುಎಫ್-3 ತಳಿಯ ನವಣೆ, ಸಿಪಿವಿಸಿ-18061 ತಳಿಯ ಕಬ್ಬು ಮೂರೂವರೆ ವರ್ಷಕ್ಕೆ ಫಸಲು ನೀಡುವ ಹಾಗೂ ವರ್ಷದಲ್ಲಿ ಎರಡು ಬಾರಿ ಫಲ ಬಿಡುವ ಬೈರಚಂದ್ರ ಹಲಸು, ಓಟ್ಸ್ ಹೋಲುವ ಮೇವಿನ ತೋಕೆ ಗೋಧಿ ಆರ್ಒ: 11-1 ತಳಿಗಳನ್ನು ಪರಿಚಯಿಸುತ್ತಿದೆ. ಕೃಷಿ ಬೆಳೆ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ 5 ತಂತ್ರಜ್ಞಾನಗಳನ್ನು ಆವಿಷ್ಕರಿಸಿದೆ. ಅದೇ ರೀತಿ ಉತ್ಪಾದನೆಗೆ 8, ಬೆಳೆ ಸಂರಕ್ಷಣೆ ಕುರಿತ 10, ರೇಷ್ಮೆ ಕೃಷಿಗೆ ಸಂಬಂಧಿಸಿದ 3, ಜೇನು ಕೃಷಿ ಮತ್ತು ಕೃಷಿ ಎಂಜಿನಿಯರಿಂಗ್ ಕುರಿತ ತಲಾ ಒಂದು ತಂತ್ರಜ್ಞಾನಗಳನ್ನು ಪರಿಚಯಿಸಲಾಗುತ್ತಿದೆ.

ಮೇಳದ ಆಕರ್ಷಣೆಗಳು

65 ಲಕ್ಷ ರೂ. ಮೌಲ್ಯದ ಎತ್ತುಗಳು

ಮಂಡ್ಯ ಮಳವಳ್ಳಿಯ ಹಳ್ಳಿಕಾರ್ ಎತ್ತುಗಳು ಈ ಬಾರಿ ಮೇಳದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ. ಈ ಎತ್ತುಗಳು ದಷ್ಟಪುಷ್ಟವಾಗಿದ್ದು ಹಲವು ವಿಶೇಷತೆಗಳನ್ನು ಒಳಗೊಂಡಿವೆ. ಅದೇ ರೀತಿ ರಾಮನಗರದ 50 ಲಕ್ಷ ರೂ. ಮೌಲ್ಯದ ಎತ್ತುಗಳನ್ನೂ ನೋಡಬಹುದು.

3 ಲಕ್ಷ ರೂ. ಗಳ ಓತ

ದೊಡ್ಡಬಳ್ಳಾಪುರದ ಜಮುನಾ ಪ್ಯಾರಿ ಹೆಸರಿನ ಓತವೂ ಮೇಳದ ಆಕರ್ಷಣೆಯಾಗಿದೆ. ಈ ತಳಿ ಅಭಿವೃದ್ಧಿಗೆ ಹೆಸರುವಾಸಿಯಾಗಿದೆ.

ರೇಷ್ಮೆ ಗೂಡು ಬಿಡಿಸುವ ಯಂತ್ರ

ಇದೇ ಮೊದಲ ಬಾರಿಗೆ ವಿವಿ ವಿದ್ಯಾರ್ಥಿಗಳು ಸಂಶೋಧಿಸಿರುವ ರೇಷ್ಮೆ ಗೂಡು ಬಿಡಿಸುವ ಯಂತ್ರವನ್ನು ಪ್ರದರ್ಶಿಸಲಾಗುತ್ತಿದೆ. ಈ ಯಂತ್ರವು ಚಂದ್ರಿಕೆಯಿಂದ ರೇಷ್ಮೆ ಗೂಡು ಬಿಡಿಸಲಿದೆ. ಸುಮಾರು 7ರಿಂದ 8 ಸಾವಿರ ರೂ. ಪೆಚ್ಚಿತಗಲಬಹುದು. ವಿದ್ಯಾರ್ಥಿಗಳು ಮೇಳದಲ್ಲಿ ಪ್ರಾತ್ಯಕ್ಷಿಕೆ ಮಾಡಲಿದ್ದಾರೆ.

10-11-2021
Uv Pg 03

ನಾಳೆಯಿಂದ 14 ವರೆಗೆ ಕೃಷಿ ಮೇಳ

ಈ ಬಾರಿ ರೈತರಿಗೆ ಭಾಗವಹಿಸಲು ಅವಕಾಶ | ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ

ಬೆಂಗಳೂರು: 2021 ನೇ ಸಾಲಿನ ಕೃಷಿ ಮೇಳ ವನ್ನು ಬೆಂಗಳೂರು ಕೃಷಿ ವಿವಿ ಜಿಕೆವಿಕೆ ಆವರಣದಲ್ಲಿ ನ.11 ರಿಂದ 14 ರವರೆಗೆ ನಡೆಸಲು ನಿರ್ಧರಿಸಲಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದರು

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಹೊಸ ತಾಂತ್ರಿಕತೆಗಳನ್ನು ಬಳಸಿಕೊಳ್ಳುವುದರ ಬಗ್ಗೆ ರೈತರಿಗೆ ಈ ಕೃಷಿಮೇಳದಲ್ಲಿ ಮಾಹಿತಿ ಒದಗಿಸಲಾಗುವುದು. ಭತ್ತ, ರಾಗಿ, ಬರಗು, ನವಣೆ, ಕಬ್ಬು, ಹಲಸು, ಮೇವಿನ ತೋಕೆ ಗೋದಿ ಸಾಮೆ ಮುಂತಾದ ಹೊಸ ತಳಿಗಳನ್ನು ಪರಿಚಯಿಸಲಾಗುವುದು. ಈ ಕೃಷಿ ಮೇಳದಲ್ಲಿ ಹತ್ತು ಹೊಸ ತಳಿಗಳು ಮತ್ತು 28 ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಲಾಗುವುದು. ಕೃಷಿ ಸಾಧಕರಿಗೆ ಪುರಸ್ಕಾರ ನೀಡಲಾಗುವುದು ಎಂದು ತಿಳಿಸಿದರು.

ಖಿುಷ್ಟಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆ, ತೋಟಗಾರಿಕೆ ಬೆಳೆಗಳ ಮತ್ತು ನಿಖರ ಕೃಷಿ ಪ್ರಾತ್ಯಕ್ಷಿಕೆ, ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಸಿರಿಧಾನ್ಯಗಳು ಹಾಗೂ ಮಹತ್ವ, ಔಷಧೀಯ ಮತ್ತು ಸುಗಂಧದ್ರವ್ಯ ಸ್ಯಗಳು, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿಗಳು, ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ, ಮಣ್ಣು ಪರೀಕ್ಷೆನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ, ರೈತರ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳು, ಮಳೆ ಹಾಗೂ ಮೇಲ್ಚಾವಣಿ ನೀರಿನ ಕೋಯ್ಲು, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಕೊಯ್ಲುನೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುವುದು. ಇದರಿಂದ ರೈತರಿಗೆ ಬಹಳ ಅನುಕೂಲವಾಗಲಿದೆ ಎಂದರು.

ಕೃಷಿ ಮೇಳದ ವಿಶೇಷತೆಗಳು

- ಕೃಷಿ ಮೇಳದಲ್ಲಿ ಹತ್ತು ಹೊಸ ತಳಿಗಳ ಪರಿಚಯ
- 28 ಆತ್ಯಾಧುನಿಕ ತಂತ್ರಜ್ಞಾನಗಳ ಬಿಡುಗಡೆ
- ಈ ಬಾರಿ ರೈತರು ಭಾಗವಹಿಸಲು ಅವಕಾಶ
- ಕಳೆದ ವರ್ಷ ವರ್ಚುವಲ್ ಮೂಲಕ ನಡೆದಿದ್ದ ಮೇಳ

ಆಲ್ದರೆ ಕೃಷಿ ಮೇಳದಲ್ಲಿ, ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ ಮಳಿಗೆಗಳ, ಕೃಷಿ ಸಂಬಂಧಿ ವಿಶ್ವವಿದ್ಯಾನಿಲಯಗಳು ಹಾಗೂ ಸಂಸ್ಥೆಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳ ಮಳಿಗೆಗಳು, ಕೃಷಿ ಎಂಜಿನಿಯರಿಂಗ್ ಮತ್ತು ಪಶುಸಂಗೋಪನೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ನೂತನ ತಂತ್ರಜ್ಞಾನಗಳನ್ನು ಕುರಿತಾದ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗುವುದು ಎಂದರು.

ಸಾಧಕರಿಗೆ ಕೃಷಿ ಪ್ರಶಸ್ತಿ: ರಾಜ್ಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿರುವಂತಹ ರೈತರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು. ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ದೊಡ್ಡಮಗ್ಗೆಯ ಎಂ.ಸಿ. ರಂಗಸ್ವಾಮಿ, ಡಾ. ಎಂ.ಎಚ್. ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕು ದೊಡ್ಡ ತುಮಕೂರಿನ ಟಿ.ಎಂ. ಅರವಿಂದ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಹಾಸನ ಜಿಲ್ಲೆ ಆಲೂರು ತಾಲೂಕು ಯಡೂರಿನ ಕುಮಾರಿ ವೈ.ಜಿ. ಮಂಜುಳಾ, ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕು ಲಕ್ಷ್ಮೀದೇವಿಪುರದ ಸಿ. ವಿಕ್ರಮ್, ಡಾ. ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿಗೆ ಕೋಲಾರ ತಾಲೂಕಿನ ಆರಿನಾಗನಹಳ್ಳಿಯ ಮುನಿರೆಡ್ಡಿ ಸೇರಿ ಹಲವರನ್ನು ಆಯ್ಕೆ ಮಾಡಲಾಗಿದೆ.

10-11-2021
Vsv Pg 12

ದೇಶೀಯ ಮಾರುಕಟ್ಟೆಯಲ್ಲಿ ಈ ಬಾರಿ ಹತ್ತಿಗೆ ದಾಖಲೆ ದರ ಲಭ್ಯವಾಗಿದೆ. ದೇಶಾದ್ಯಂತ ಹತ್ತಿ ಬೆಳೆಗಾರರ ಮುಖದಲ್ಲಿ ದೀಪಾವಳಿಯ ಬೆಳಕು ಮಿಂಚಿದೆ. ಉತ್ತಮ ಮಳೆಗಾಲದ ಜೊತೆಗೆ ದೇಶದ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಯಾವುದೇ ರೀತಿಯ ರೋಗ, ಕೀಟ ಬಾಧೆ ದೊಡ್ಡ ಮಟ್ಟದಲ್ಲಿ ಕಾಣಿಸಿಕೊಳ್ಳದೇ ಇರುವದು ರೈತರ ಪಾಲಿಗೆ ಪ್ಲಸ್ ಪಾಯಿಂಟ್ ಆಗಿದೆ.

ದರ ಏರಿಕೆ ಗಾಳಿಯಲ್ಲಿ ತೂರಿಕೊಂಡ ಬಿಳಿ ಬಂಗಾರ



ಹತ್ತಿ ಬೆಳೆಗಾರರು ಈ ಬಾರಿ ದೀಪಾವಳಿಯ ಬೆಳಕಿನಲ್ಲಿ ಮಿರಮಿರ ಮಿಂಚತೊಡಗಿದ್ದಾರೆ. ಹತ್ತಿ ಬೆಲೆ ದೇಶದ ಪ್ರಮುಖ ಮಾರುಕಟ್ಟೆಗಳಲ್ಲಿ ತೀವ್ರ ಏರಿಕೆಯಾಗಿರುವುದೇ ಇದಕ್ಕೆ ಕಾರಣ. ನವೆಂಬರ ತಿಂಗಳ ಮೊದಲ ವಾರದಲ್ಲಿ ದರ ಕ್ವಿಂಟಲ್‌ಗೆ 8,500 ರೂಗಿಂತ ಅಧಿಕ ಏರಿಕೆ ಕಂಡಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು 4000-5,500 ರೂ ಶ್ರೇಣಿಯಲ್ಲಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.70ರಷ್ಟು ಏರಿಕೆಯಾಗಿದೆ.

ಪ್ರಥಮ ಬಾರಿಗೆ ರೈತರು ಇಂಥ ದಾಖಲೆ ದರವನ್ನು ಕಂಡು ಸಂಭ್ರಮಾಚರಣೆ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆ ಕ್ವಿಂಟಲ್‌ಗೆ 4,800 ರೂ ದರಕ್ಕೆ ಹತ್ತಿ ಮಾರಿದವರು ಈ ಬಾರಿ ದೀಪಾವಳಿಗೂ ಮುನ್ನ 8000 ರೂಶ್ರೇಣಿಯ ದರಕ್ಕೆ ಮಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಹತ್ತಿ ದರ ಕೇವಲ ದೇಶೀಯ ಮಟ್ಟದಲ್ಲಷ್ಟೇ ಅಲ್ಲ ಜಾಗತಿಕ ಮಾರುಕಟ್ಟೆಯಲ್ಲೂ ಭಾರೀ ಏರಿಕೆ ಕಂಡಿದೆ. ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಪೌಂಡ್ ಒಂದಕ್ಕೆ 108.26 ಸೆಂಟ್ಸ್ ದರ(ಕ್ಯಾಂಡಿಯೊಂದಕ್ಕೆ 68,600 ರೂ) ದಾಖಲಾಗಿದೆ. ರಫ್ತು ಗುಣಮಟ್ಟ ಹೊಂದಿರುವ ಶಂಕರ್-6 ತಳಿ ಹತ್ತಿ ಬೆಳೆದ ಬೆಳೆಗಾರರು ಭರ್ಜರಿ ಲಾಭ ಗಳಿಸುವಂತಾಗಿದೆ. ಕರ್ನಾಟಕ ರಾಜ್ಯದಲ್ಲಿ ಬೆಳೆದ ಹತ್ತಿಗೂ ಕೂಡ ಉತ್ತಮ ದರ ದೊರೆತಿದೆ. ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದ ರೈತರ ಮೊಗದಲ್ಲೂ ಮಂದಹಾಸ ಮಿನುಗಿದೆ.



ಉತ್ತಮ ಮಳೆಗಾಲದ ಜೊತೆಗೆ ದೇಶದ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಯಾವುದೇ ರೀತಿಯ ರೋಗ, ಕೀಟ ಬಾಧೆ ದೊಡ್ಡ ಮಟ್ಟದಲ್ಲಿ ಕಾಣಿಸಿಕೊಳ್ಳದೇ ಇರುವದು ರೈತರ ಪಾಲಿಗೆ ಪ್ಲಸ್ ಪಾಯಿಂಟ್ ಆಗಿದೆ. ಜೊತೆಗೆ ಉತ್ತಮ ಗುಣಮಟ್ಟದ್ದಾಗಿರುವ ಕಾರಣ ದರ ಹೆಚ್ಚಳವಾಗುವಂತಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಜಾಗತಿಕ ಮಾರುಕಟ್ಟೆಯಲ್ಲಿರುವ ತೇಜಿ ಪ್ರವೃತ್ತಿಯ ಪರಿಣಾಮ ದೇಶೀಯ ಮಾರುಕಟ್ಟೆ ಮೇಲೂ ಆಗಿದೆ ಎಂದು ವಿಶ್ಲೇಷಿಸಲಾಗಿದೆ.

ಉತ್ಪಾದನೆ ಹೆಚ್ಚಳ

ಪಿತೃಧ್ಯ 2021-22ನೇ ಸಾಲಿಗೆ ಹತ್ತಿ ಉತ್ಪಾದನೆ 360 ಲಕ್ಷ ಬೇಲ್ಸ್(ಒಂದು ಬೇಲ್‌ಗೆ 170 ಕೆಜಿ) ದಷ್ಟಾಗಲಿದೆ ಎಂದು ಸಿಎಐ(ಭಾರತೀಯ ಹತ್ತಿ ನಿಗಮ) ಅಂದಾಜಿಸಿದೆ. ಪ್ರಸಕ್ತಸಾಲಿನಸೆ.30ಕ್ಕೆಕೊನೆಗೊಂಡಹಂಗಾಮಿಗೆ353ಲಕ್ಷಬೇಲ್ಸ್‌ದಷ್ಟಾಗುವದೆಂದು ಅಂದಾಜಿಸಿತ್ತು. ಹೊಸ ಹಂಗಾಮಿನಲ್ಲಿ 335 ಲಕ್ಷ ಬೇಲ್ಸ್ ಪ್ರಮಾಣದ ಹತ್ತಿ ಬಳಕೆಯಾಗಲಿದೆ. 10 ಲಕ್ಷ ಬೇಲ್ಸ್‌ದಷ್ಟು ಹತ್ತಿ ಆಮದಾಗಲಿದೆ ಎಂದು ತಿಳಿಸಿದೆ. ಆದರೆ 2020-21ನೇ ಸಾಲಿನಲ್ಲಿ ಸುಮಾರು 78 ಲಕ್ಷ ಬೇಲ್ಸ್‌ದಷ್ಟು ಪ್ರಮಾಣದಹತ್ತಿಯನ್ನು ರಫ್ತು ಮಾಡಲಾಗಿದೆ. ಹೊಸ ಹಂಗಾಮಿನಲ್ಲಿ ಇದು 48 ಲಕ್ಷ ಬೇಲ್ಸ್‌ಗೆ ಇಳಿಕೆಯಾಗುವದೆಂದು ನಿರೀಕ್ಷಿಸಲಾಗಿದೆ.

ಗುಜರಾತ್‌ನಲ್ಲಿ ಹತ್ತಿ ಉತ್ಪಾದನೆ 96.99 ಲಕ್ಷ ಬೇಲ್ಸ್‌ದಷ್ಟಾಗಲಿದೆ ಎಂದು ಹೇಳಲಾಗಿದ್ದು, ಕಳೆದ ಹಂಗಾಮಿನಲ್ಲಾಗಿದ್ದ 91.5 ಲಕ್ಷ ಬೇಲ್ಸ್‌ಗಿಂತ ಶೇ. 6 ರಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜಿಸಲಾಗಿದೆ. ಮಹಾರಾಷ್ಟ್ರದಲ್ಲಿ86.46 ಲಕ್ಷ, ತೆಲಂಗಾಣದಲ್ಲಿ 45.91 ಲಕ್ಷ ಬೇಲ್ಸ್‌ದಷ್ಟಾಗಲಿದೆ ಎಂದು ಮಾಹಿತಿ ನೀಡಿದೆ. ಇನ್ನು ದಕ್ಷಿಣ ಭಾರತ ಭಾಗದಲ್ಲಿ ಹತ್ತಿ ಉತ್ಪಾದನೆ ಸುಮಾರು 95.76 ಲಕ್ಷ ಬೇಲ್ಸ್‌ದಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಕಳೆದ ಹಂಗಾಮಿನಲ್ಲಿ ಇದು 91.5 ಲಕ್ಷ ಬೇಲ್ಸ್‌ದಷ್ಟಿತ್ತು. ಕರ್ನಾಟಕ, ತಮಿಳುನಾಡು ಹಾಗೂ ತೆಲಂಗಾಣಗಳಲ್ಲಿ ಬಂಪರ್ ಉತ್ಪಾದನೆಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ. ಆದರೆ ಆಂಧ್ರಪ್ರದೇಶದಲ್ಲಿ ಕಳೆದ ಹಂಗಾಮಿನಲ್ಲಾಗಿದ್ದ 16 ಲಕ್ಷ ಬೇಲ್ಸ್‌ಗೆ ಹೋಲಿಸಿದರೆ ಈ ಬಾರಿ 14.3 ಲಕ್ಷ ಬೇಲ್ಸ್‌ದಷ್ಟಾಗಲಿದೆ. ಸುಮಾರು ಶೇ.10ರಷ್ಟು ಇಳಿಕೆಯಾಗಲಿದೆ ಎಂದು ವಿವರಿಸಿದೆ.

10-11-2021
Sk Pg 12

ಬಹು ಉಪಯೋಗಿ ಪಾರ್ಥೇನಿಯಮ್ ಕಸ

ಪಾರ್ಥೇನಿಯಮ್ ಕಳೆಯು ಕೃಷಿ ಹಾಗೂ ಕೃಷಿಯೇತರ ಭೂಮಿ, ರಸ್ತೆ ಬದಿ, ಆಟದ ಮೈದಾನ, ಶಾಲಾ-ಕಾಲೇಜು ಆವರಣ ಹಾಗೂ ಇತರೆ ಖಾಲಿ ಪ್ರದೇಶಗಳಲ್ಲಿ ಬೆಳೆಯುತ್ತದೆ. ಭಾರತದಲ್ಲಿ ಈ ಕಳೆಯು ಸುಮಾರು 35 ಮಿಲಿಯನ್‌ಹೆಕ್ಟೇರ್ ಪ್ರದೇಶದಲ್ಲಿ ಆವರಿಸಿಕೊಂಡಿದೆ. ಮೇಲ್ನೋಟಕ್ಕೆ ಇದು ಹಾನಿಕಾರಕ ಕಹಿಯಾದ ಕಳೆಯಾಗಿದ್ದರೂ ಭೂಮಿಯ ಫಲವತ್ತತೆಯನ್ನು ಕಾಪಾಡಲು ಬಹಳಸಹಕಾರಿಯಾಗಿದೆ.

ಕಾಂಪೋಷ್ಟ ತಯಾರಿ

ನಾಡೆಪ್ ಅಥವಾ ತೆರೆದ ಗುಂಡಿಯ ಪದ್ಧತಿಯಲ್ಲಿ ಕಾಂಪೋಷ್ಟ ತಯಾರಿಸಲು ಹೂ ಬಿಡುವ ಮುಂಚಿತವಾಗಿಯೇ ಪಾರ್ಥೇನಿಯಮ್ ಕಳೆಗಳನ್ನು ಸಂಗ್ರಹಿಸಬೇಕು. ಆದರೆ ಹೂ ಬಿಡದ ಪಾರ್ಥೇನಿಯಮ್ ಗಿಡಗಳು ಒಂದೇ ಸಮಯದಲ್ಲಿ ಲಭ್ಯವಾಗುವುದು ಕಷ್ಟ. ಏಕೆಂದರೆ ಪಾರ್ಥೇನಿಯಮ್ ಬೀಜವು ನೀರಿನ ಲಭ್ಯತೆಗನುಗುಣವಾಗಿ ವರ್ಷದ ಎಲ್ಲಾ ಕಾಲದಲ್ಲಿಯೂ ಮೊಳಕೆಯೊಡೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಆದ್ದರಿಂದ ರೈತರು ಕಾಲಕಾಲಕ್ಕೆ ಹೂವಾಗುವ ಮುಂಚೆ ಪಾರ್ಥೇನಿಯಮ್ ಗಿಡಗಳನ್ನು ಬೇರುಸಮೇತಕಿತ್ತುಹಾಕುತ್ತಿರಬೇಕು. ಪಾರ್ಥೇನಿಯಮ್ ಕಸದಿಂದ ಕಾಂಪೋಷ್ಟ ತಯಾರಿಸಲು ಕೆಳಗಿನ ವಿಧಾನವನ್ನು ಅನುಸರಿಸಬಹುದು.

ನೀರು ನಿಲ್ಲದ ಸ್ಥಳದಲ್ಲಿ 3★6★10 ಅಡಿಯ(ಆಳ-ಅಗಲ-ಉದ್ದ) ಗುಂಡಿಯನ್ನು ಮಾಡಬೇಕು ಅಥವಾ ಗುಂಡಿಯ ಆಳದಲ್ಲಿ ಯಾವುದೇ ಬದಲಾವಣೆ ಮಾಡದೆ ಗುಂಡಿಯ ಇನ್ನಿತರ ಅಳತೆಯನ್ನು ಹೆಚ್ಚು-ಕಡಿಮೆ ಮಾಡಿಕೊಳ್ಳಬಹುದು. ಚಪ್ಪಟೆ ಕಲ್ಲುಗಳು ಸಿಗದಿದ್ದರೆ ಮಣ್ಣಿನಿಂದ ಗುಂಡಿಯ ಮೇಲ್ಛೈಯನ್ನು ಕಟ್ಟೆಂಸ್ಲಾಗಿಸಿ ತಯಾರಿಸಬಹುದು. ಗುಂಡಿಯ ಪಕ್ಕದಲ್ಲಿ 100 ಕೆ.ಜಿ. ಸಗಣಿ, 10 ಕೆ.ಜಿ. ಯೂರಿಯಾ/ರಾಕ್ ಫಾಸ್ಫೇಟ್, 50 ಕೆ.ಜಿ. ಮಣ್ಣು ಮತ್ತು 200 ಲೀಟರ್ ನೀರಿನ ದ್ರಾವ್ಯವನ್ನು ಮಾಡಬೇಕು. ಜಮೀನಿನಲ್ಲಿರುವ ಮತ್ತು ಸುತ್ತ-ಮುತ್ತಲು ಸಿಗುವ ಸುಮಾರು 50 ರಿಂದ 100 ಕೆ.ಜಿ. ಪಾರ್ಥೇನಿಯಮ್ ಗಿಡಗಳನ್ನು ಸಂಗ್ರಹಿಸಿ ಗುಂಡಿಯಲ್ಲಿ ಹರಡಬೇಕು.

ಅದರ ಮೇಲೆ 500 ಗ್ರಾಮ್ ಯೂರಿಯಾ/10 ಕೆ.ಜಿ ರಾಕ್ ಫಾಸ್ಫೇಟ್‌ನ್ನು ಸಿಂಪಡಿಸಬೇಕು. ಸಾಧ್ಯವಾದರೆ ಪ್ರತಿ ಪದರದ ಮೇಲೆ 50 ಗ್ರಾಮ್ ನಷ್ಟು ಟ್ರೈಕೋಡರ್ಮಾ ಹುಡಿಯನ್ನು ಸೇರಿಸಬಹುದು. ಹೀಗೆ ಎಲ್ಲಾ ಘಟಕಗಳು ಸೇರಿ ಒಂದು ಪದರವಾಗುತ್ತದೆ. ಇದೇ ರೀತಿಯಲ್ಲಿ ಭೂಮಿಯಿಂದ ಒಂದು ಅಡಿ ಎತ್ತರವಾಗುವಷ್ಟು ಅನೇಕ ಪದರಗಳನ್ನು ತುಂಬುತ್ತಾ ಬರಬೇಕು. ಗೋಲಾಕಾರದಲ್ಲಿ ಗುಂಡಿಯನ್ನು ತುಂಬಬೇಕು. ಗುಂಡಿಯಲ್ಲಿ ಪದರನ್ನು ಮಾಡುವುದರಿಂದ ಪ್ರತಿ ಪದರಗಳು ಗಟ್ಟಿಯಾಗುತ್ತವೆ. ಪಾರ್ಥೇನಿಯಮ್ ಕಳೆಯ ಬೇರಿನಲ್ಲಿ ಮಣ್ಣು ಇಲ್ಲದಿದ್ದರೆ ಪ್ರತಿ ಪದರದ ನಂತರ ತೆಳುವಾಗಿ (10 ರಿಂದ 12 ಕೆ.ಜಿ)



ಮಣ್ಣನ್ನು ಹರಡಬೇಕು.

ಗುಂಡಿಯು ತುಂಬಿದ ನಂತರ ಅದರ ಮೇಲ್ಭೈಯನ್ನು ಸಗಣಿ, ಮಣ್ಣು ಮತ್ತು ಹೊಟ್ಟಿನಿಂದ ಮುಚ್ಚಬೇಕು. ಸುಮಾರು 4ರಿಂದ 5 ತಿಂಗಳ ನಂತರ 100 ಕೆ.ಜಿ. ಪಾರ್ಥೇನಿಯಮ್ ಗಿಡದಿಂದ ಚೆನ್ನಾಗಿ ಕಳೆತ 40 ರಿಂದ 45 ಕೆ.ಜಿ ಕಾಂಪೋಷ್ಟ ಗೊಬ್ಬರ ತಯಾರಾಗುತ್ತದೆ.

ಮುನ್ನೆಚ್ಚರಿಕೆ ಕ್ರಮಗಳು

ಕಾಂಪೋಷ್ಟ ತಯಾರಿಸುವ ಗುಂಡಿಯು ತೆರೆದಿರಬೇಕು ಮತ್ತು ಎತ್ತರದ ಪ್ರದೇಶದ ನೆರಳಿನಲ್ಲಿರಬೇಕು. ಗುಂಡಿಯನ್ನು ಮಣ್ಣು, ಸಗಣಿ ಮತ್ತು ಹೊಟ್ಟಿನ ಮಿಶ್ರಣದಿಂದ ಮುಚ್ಚಬೇಕು.ಗುಂಡಿಗೆ ತುಂಬಲು ಪಾರ್ಥೇನಿಯಮ್‌ನ್ನು ಸಂಗ್ರಹಣೆ ಮಾಡಿದ ಸ್ಥಳದಲ್ಲಿ ಪಾರ್ಥೇನಿಯಂ ಬೀಜಗಳಿದ್ದರೆ ಅವುಗಳು ಮೊಳಕೆಯೊಡೆದು, ಬೆಳೆದುಹೂಬಿಟ್ಟನಂತರಕಾಂಪೋಷ್ಟ ಗುಣಮಟ್ಟವನ್ನು ಹಾಳು ಮಾಡುತ್ತದೆ. ಆದ್ದರಿಂದ ಗುಂಡಿಯ ಪಕ್ಕದಲ್ಲಿ ಬೀಜಗಳಿದ್ದರೆ ಅವುಗಳನ್ನು ನಾಶ ಮಾಡಬೇಕು. ಗುಂಡಿಯಲ್ಲಿ ತೇವಾಂಶದ ಕೊರತೆ ಕಂಡು ಬಂದರೆ ಅದರಲ್ಲಿ ಸಣ್ಣ ತೂತುಗಳನ್ನು ಮಾಡಿ ಆ ತೂತುಗಳಲ್ಲಿ ನೀರು ಹಾಕಿ ತದನಂತರ ತೂತುಗಳನ್ನು ಮುಚ್ಚಬೇಕು.

ಪಾರ್ಥೇನಿಯಮ್‌ನಿಂದ ತಯಾರಿಸಿದ ಕಾಂಪೋಷ್ಟ ಗೊಬ್ಬರವು ಬೆಳೆಗಳ ಮೇಲೆ ಮಾನವನ ಆರೋಗ್ಯದ ಮೇಲೆ ಮತ್ತು ಪರಿಸರದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ಬೀರುವುದಿಲ್ಲ. ಪೋಷಕಾಂಶಗಳು ಪೋಲಾಗುವುದನ್ನು ತಡೆಗಟ್ಟಬಹುದು. ಕೊಟ್ಟಿಗೆ ಗೊಬ್ಬರಕ್ಕೆ ಹೋಲಿಸಿದಲ್ಲಿ ಪಾರ್ಥೇನಿಯಮ್‌ನಿಂದ ತಯಾರಾದ ಗೊಬ್ಬರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾರಜನಕ, ರಂಜಕ, ಪೋಟ್ಯಾಷ್ ಆಹಾರಗಳು ಸಮತೋಲನದಲ್ಲಿ ಇರುತ್ತವೆ. ಇದರ ಜೊತೆಗೆ ಅಗತ್ಯವಾದ ಲಘು ಪೋಷಕಾಂಶಗಳು ಸಹ ಇರುತ್ತವೆ.

ಆತಿ ಕಡಿಮೆ ಖರ್ಚಿನಲ್ಲಿ ಪಾರ್ಥೇನಿಯಮ್‌ನಿಂದ ಕಾಂಪೋಷ್ಟ ತಯಾರಾಗುವುದಲ್ಲದೆ ಮಣ್ಣಿನ ಫಲವತ್ತತೆಯನ್ನು ಅಭಿವೃದ್ಧಿಗೊಳಿಸುತ್ತದೆ. ಇದರಲ್ಲಿ ಅಳಿದುಳಿದ ಕಳೆಯಿಂದ ಜಮೀನಿನಲ್ಲಿರುವ ಹಾನಿಕಾರಕ ಕೀಟಗಳು ನಾಶವಾಗುತ್ತವೆ.

■ ಬಸವರಾಜ ಶಿವಪ್ಪ ಗಿರಗಾಂವಿ
ಜಮಖಂಡಿ